


International Journal of Kannada Research
www.kannadajournal.com

**ISSN: 2454–5813**
IJKR 2017; 3(4): 72-79
© 2017 IJKR
www.kannadajournal.com
Received: 13-08-2017
Accepted: 14-09-2017

**Dr. Rajesh Bejjangala**
Researcher, Nandila, Puttur,
Karnataka, India

**Correspondence**
**Dr. Rajesh Bejjangala**
Researcher, Nandila, Puttur,
Karnataka, India

# ತುಳುನಾಡಿಗೆ ಸಂಬಂಧಿಸಿದ ಸಂಶೋಧನಾ ಲೇಖನವೊಂದನ್ನು ಪ್ರಕಟಿಸುವ ಕುರಿತು

**Dr. Rajesh Bejjangala**

**ಭೂತಾಳ ಪಾಂಡ್ಯನ ಅಳಿಯಕಟ್ಟು**

ಸಮುದ್ರವನ್ನು ತನ್ನ ಒಂದು ಮೇರೆಯನ್ನಾಗಿಸಿರುವ ಕರ್ನಾಟಕದ ದಕ್ಷಿಣ ಭಾಗವಾಗಿರುವ ತುಳುನಾಡು ವೈವಿಧ್ಯಮಯ ಸಂಸ್ಕೃತಿಯ ನಾಡು. ಕಾಸರಗೋಡು ಜಿಲ್ಲೆಯ ಚಂದ್ರಗಿರಿಯಿಂದ ಆರಂಭವಾಗಿ ಕರ್ನಾಟಕದ ಉತ್ತರದಲ್ಲಿ ಕಲ್ಯಾಣಪುರ ಹೊಳೆಯವರೆಗೆ ತುಳುನಾಡಿನ ಪ್ರಾದೇಶಿಕ ವ್ಯಾಪ್ತಿಯಿದೆ. ಉಡುಪಿ, ಮಂಗಳೂರು, ಕಾರ್ಕಳ ಸುಳ್ಯ, ಬಂಟ್ವಾಳ, ಪುತ್ತೂರು, ಬೆಳ್ತಂಗಡಿ, ಮಂಜೇಶ್ವರ, ಕುಂಬಳೆ, ಕಾಸರಗೋಡು ಮೊದಲಾದ ಪ್ರದೇಶಗಳನ್ನು ಒಳಗೊಳ್ಳುವ ಈ ವ್ಯಾಪ್ತಿಯಲ್ಲಿ ಬಿಲ್ಲವರು, ಬಂಟರು, ಗಾಣಿಗರು, ಮೊಗವೀರರು, ಮೂಲ್ಯರು, ಗಟ್ಟಿಯವರು, ವಿವಿಧ ಪರಿಶಿಷ್ಟ ಪಂಗಡದವರು ಮೊದಲಾದ ಹಲವಾರು ಜಾತಿಗಳಿವೆ. ಇವರಲ್ಲಿ ಸಂಪ್ರದಾಯ ಹಾಗೂ ಆಚರಣೆಗಳಲ್ಲಿ ವ್ಯತ್ಯಾಸಗಳಿದ್ದರೂ ಕುಟುಂಬ ವ್ಯವಸ್ಥೆಯಲ್ಲಿ ಸಾಮ್ಯವಿದೆ. ಭಾರತೀಯ ಕುಟುಂಬ ವ್ಯವಸ್ಥೆಯನ್ನು ಒಟ್ಟಾಗಿ ಅವಲೋಕಿಸಿದಾಗ ತುಳುನಾಡಿನದ್ದು ಮಾತೃಪ್ರಧಾನ ವ್ಯವಸ್ಥೆ ಎನ್ನುವುದರಲ್ಲಿ ಯಾವುದೇ ಸಂಶಯವೂ ಇಲ್ಲ. ಮುಖ್ಯವಾಗಿ ಇಲ್ಲಿಯ ಪರಿಸರ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯನ್ನು ನೆಲೆಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ.ಆದರೆ ಗೊಂದಲವಿರುವುದು ಅಳಿಯ ಕಟ್ಟು ಮತ್ತು ಮಾತೃ ಪ್ರಧಾನತೆಯ ಮೇಲೆ ಆಗಿರುತ್ತದೆ. ಯಾವುದು ಮೊದಲು ಅಥವಾ ಯಾವುದು ನಂತರ ಮತ್ತು ಯಾವುದು ಯಾವುದಕ್ಕೆ ಮೂಲ ಎಂಬ ವಿಷಯದಲ್ಲಿ ಆಗಿರುತ್ತದೆ.ಭೂತಾಳ ಪಾಂಡ್ಯನ ನಂತರ ಅಳಿಯ ಕಟ್ಟು ಅರಂಭವಾಯಿತು ; ಅತ ಅದಕ್ಕೊಂದು ಚೌಕಟ್ಟನ್ನು ನೀಡಿದ ; ಕುಂಡೋದರ ಭೂತದ ಮೂಲಕ ಅದನ್ನು ಜನಪ್ರಿಯಗೊಳಿಸಿದ; ಹೀಗೆ ಚರ್ಚೆಗಳು ಮುಂದುವರಿಯುತ್ತವೆ. ಅದರೆ ತುಳುನಾಡಿನಲ್ಲಿರುವುದು ಅಳಿಯಕಟ್ಟಲ್ಲ ; ಮಾತೃಪ್ರದಾನ ವ್ಯವಸ್ಥೆ.ಆದರೆ ಈ ಹೆಸರಿನಿಂದ ಕರೆಯಲು ಕಾರಣವಾಗಿರುವುದು ಅಗಿನ ಕಾಲದ ಗೊಂದಲ ಅಷ್ಟೆ. ಈ ಗೊಂದಲವನ್ನು ಪರಿಹರಿಸುವುದು ಈ ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿತ್ತು. ಮಾತೃ ಪ್ರಧಾನ ವ್ಯವಸ್ಥೆಯ ಇನ್ನೊಂದು ರೂಪವನ್ನು ಪಡೆದಿರುವ ಅಳಿಯ ಸಂತಾನ ಕಟ್ಟು ತುಳುನಾಡಿನಲ್ಲಿ ಬೇರೆ ಬೇರೆ ನೆಲೆಗಳಲ್ಲಿ ಬೆಳೆದು ಬಂತು. ಭೂತಾಳ ಪಾಂಡ್ಯನ ನಂತರ ತುಳುನಾಡನ್ನು ಆಳಿದ ವಿವಿಧ ರಾಜ ವಂಶಸ್ಥರು, ಅಳಿಯ ಸಂತಾನ ಕಟ್ಟನ್ನು ಅನುಸರಿಸುತ್ತಿದ್ದ ಪ್ರಜೆಗಳ ತೃಪ್ತಿಗಾಗಿ ಮುಂದುವರಿಸುತ್ತಿದ್ದರು. ವಿವಿಧ ವಿದ್ವಾಂಸರ ಅಭಿಪ್ರಾಯದ ಪ್ರಕಾರ ಕ್ರಿ ಶ ೧೦ ನೇ ಶತಮಾನದ ನಂತರ ತುಳುನಾಡಿನಲ್ಲಿ ಅಳಿಯ ಸಂತಾನ ಪದ್ಧತಿ ಜಾರಿಯಲ್ಲಿತ್ತು ಎಂದು ತಿಳಿದು ಬರುತ್ತದೆ.

ತುಳುನಾಡಿನ ಕುಟುಂಬ ವ್ಯವಸ್ಥೆಯಲ್ಲಿ ಗೊಂದಲ ಇರುವ ಅಂಶವೇನೆಂದರೆ ಮಾತೃ ಪ್ರಧಾನ ಹೇಗಾಯಿತು ಎನ್ನುವುದಾಗಿದೆ. ಇದರ ಬಾಹ್ಯ ಮತ್ತು ಆಂತರಿಕ ಕಾರಣಗಳನ್ನು ಈಗಾಗಲೇ ಚರ್ಚಿಸಿಯಾಗಿದೆ.ಆದರೆ ಇದು ಭೂತಾಳ ಪಾಂಡ್ಯನ ದಂತಕತೆಯ ನಂತರ ಅರಂಭವಾಯಿತೋ ಅಥವಾ ಅದಕ್ಕಿಂತ ಮೊದಲೇ ಇತ್ತೋ ಎನ್ನುವುದು.ಆದರೆ ಲಭ್ಯ ಆಧಾರ ಮತ್ತು ಭೂತಾಳ ಪಾಂಡ್ಯನ ಕಟ್ಟು ಕಟ್ಟಳೆಗಳಲ್ಲಿ ಸಿಗುವ ವಿವಿಧ ಅಂಶಗಳಿಂದ ಮಾತೃ ಪ್ರಧಾನ ವ್ಯವಸ್ಥೆ ಮೊದಲೇ ಇತ್ತು ಎನ್ನುವದು ಸ್ಪಷ್ಟವಾಗುತ್ತದೆ.ಮಾತೃ ಪ್ರಧಾನ ಎನ್ನುವ ಹೆಸರು ಚಾಲ್ತಿಯಲ್ಲಿ ಬಂದಿರುವುದು ತುಳುನಾಡಿಗೆ ಇತರ ಕಡೆಗಳಿಂದ ವಿವಿಧ ಧರ್ಮ ಜಾತಿಗಳ ಜನರು ಆಗಮಿಸಿದಾಗ ಎಂಬ ಅಂಶ ಚರಿತ್ರೆಯಿಂದ ತಿಳಿದು ಬರುತ್ತದೆ.ಅಲ್ಲಿಯವರೆಗೆ ಈ ವ್ಯವಸ್ಥೆಯನ್ನು ನಿರ್ದಿಷ್ಟ ಹೆಸರಿನಿಂದ ಕರೆಯುತ್ತಿರಲಿಲ್ಲ ಮಾತ್ರವಲ್ಲ ಅದರ ಅಗತ್ಯ ಕೂಡಾ ಇರಲಿಲ್ಲ.ಮಾತೃಪ್ರದಾನ ವ್ಯವಸ್ಥೆಯಲ್ಲಿ ಆಸ್ತಿ ಮತ್ತು ಅಧಿಕಾರಕ್ಕೆ ಸಂಬಂಧಿಸಿದಂತೆ ಮಾತ್ರ ಅಳಿಯ ಕಟ್ಟು ವ್ಯವಸ್ಥೆಯನ್ನು ಗುರುತಿಸುತ್ತಿದ್ದರೇ ವಿನಾ ಎಲ್ಲವನ್ನೂ ಒಟ್ಟಾಗಿ ಅಳಿಯ ಸಂತಾನಕಟ್ಟು ಎಂದು ಗುರುತಿಸುತ್ತಿರಲಿಲ್ಲ.ಮಾತ್ರವಲ್ಲ ಈ

ನಿಯಮದಡಿಯಲ್ಲಿ ತರುವುದಕ್ಕೆ ಕೂಡಾ ಸಾಧ್ಯವಿಲ್ಲ ಯಾಕೆಂದರೆ ಅಳಿಯನಾಗಿ ಒಬ್ಬ ವ್ಯಕ್ತಿಗೆ ಅಧಿಕಾರ ಲಭಿಸುವುದು ಆತನ ತಾಯಿಯ ಅಧಿಕಾರದ ಮೂಲಕವೇ ಆಗಿರುತ್ತದೆ. ಅದುದರಿಂದ ಇದನ್ನು ಮಾತೃ ಪ್ರದಾನ ಕುಟುಂಬ ಎಂದು ಗುರುತಿಸಲು ಸಾಧ್ಯವಿದೆ.

ಪಾಡ್ದನದಲ್ಲಿ ವ್ಯಕ್ತವಾಗುವ ಕುಟುಂಬ ವ್ಯವಸ್ಥೆಯನ್ನು ಅವಲೋಕಿಸುವ ಮೊದಲು ಭೂತಾಳ ಪಾಂಡ್ಯನಿಂದ ಘೋಷಣೆಯಾಗಿರುವ ಅಳಿಯಕಟ್ಟನ್ನು ವಿಶ್ಲೇಷಿಸುವುದು ಅಗತ್ಯವಾಗಿದೆ. ಪ್ರಸ್ತುತ ತುಳುನಾಡಿನಲ್ಲಿ ಜಾರಿಯಲ್ಲಿರುವ ಮಾತೃ ಪ್ರಧಾನ ವ್ಯವಸ್ಥೆಯನ್ನು ಅಳಿಯಕಟ್ಟು ಎಂದು ಸಾರಸಗಟಾಗಿ ನಂಬುವುದರಿಂದ ಮತ್ತು ಈ ವ್ಯವಸ್ಥೆ ಭೂತಾಳ ಪಾಂಡ್ಯನಿಂದಲೇ ಆರಂಭವಾಯಿತು ಎನ್ನುವ ಸಾಮಾನ್ಯ ಕಲ್ಪನೆಯನ್ನು ಅಥವಾ ಸಂಶಯವನ್ನು ದೂರಗೊಳಿಸುವ ನಿಟ್ಟಿನಲ್ಲಿ ಭೂತಾಳಪಾಂಡ್ಯನ ಅಳಿಯಕಟ್ಟಿನ ನೆಲೆ ಮತ್ತು ಹಿನ್ನೆಲೆಯನ್ನು ಚರ್ಚಿಸಬೇಕಾಗಿದೆ. ತುಳುನಾಡಿನಲ್ಲಿ ತುಳು ಮಾತನಾಡುವ ಹಲವಾರು ಜನಾಂಗಗಳು ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯನ್ನು ಅನುಸರಿಸುತ್ತಿವೆ. ಇವರೊಂದಿಗೆ ಮಾತೃ ಸಂಸ್ಕೃತಿಯ ಅಂಶಗಳನ್ನು ಒಳಗೊಂಡ ಪಿತೃ ಪ್ರಧಾನ ವ್ಯವಸ್ಥೆಯ ಜಾತಿಗಳೂ ಇವೆ. ಆದರೆ ಸಾಮಾನ್ಯವಾಗಿ ಅಳಿಯಕಟ್ಟು ಸಂಪ್ರದಾಯವೇ ಇಲ್ಲಿ ಜಾರಿಯಲ್ಲಿದೆ ಮತ್ತು ಅದು ಭೂತಾಳ ಪಾಂಡ್ಯನಿಂದ ಆರಂಭವಾಯಿತು ಎನ್ನುವ ಬಲವಾದ ನಂಬಿಕೆ ಇನ್ನೂ ಇದೆ. ಅಳಿಯ ಕಟ್ಟು ಮತ್ತು ಮಾತೃ ಪ್ರಧಾನ ವ್ಯವಸ್ಥೆಗಳ ಮಧ್ಯೆ ಇರುವ ಗೊಂದಲ ಮತ್ತು ಸಮಾನ ಅಂಶಗಳನ್ನು ಗುರುತಿಸಿ ಆ ಮೂಲಕ ಯಾವುದು ಯಾವುದರ ಮೇಲೆ ಪ್ರಭಾವ ಬೀರಿದೆ ಎಂಬುದನ್ನು ಕಂಡು ಕೊಳ್ಳುವುದು ಈ ಸಂದರ್ಭದಲ್ಲಿ ಮುಖ್ಯವಾಗುತ್ತದೆ.

ಭೂತಾಳ ಪಾಂಡ್ಯನು ಅಳಿಯ ಕಟ್ಟನ್ನು ಘೋಷಿಸಲು ಘಟನೆಯೊಂದರ ಸಹಾಯವನ್ನು ಪಡೆದು ಕೊಂಡದ್ದು ಸ್ಪಷ್ಟವಾಗುತ್ತದೆ. 'ಪಾಂಡ್ಯ ದೇಶದ ದೇವ ಪಾಂಡ್ಯನೆಂಬೊಬ್ಬ ವ್ಯಾಪಾರ ನಿರತನಾಗಿದ್ದನು. ಒಂದು ದಿನ ಪೂಜೆಯನ್ನು ಸಲ್ಲಿಸಿ ಹಡಗನ್ನು ಕಡಲಿಗೆ ಇಳಿಸುವ ಸಂದರ್ಭದಲ್ಲಿ ಹಡಗಿನ ಒಳಗಿಂದ ಮಹಾಗರ್ಜನೆಯು ಕೇಳಿಬಂತು. ಆಗ ಎಲ್ಲಾ ಜನರು ಗಾಬರಿಯಾಗಿ ಎದ್ದು ನಿಲ್ಲಲು ಎಲೆ ದೇವ ಪಾಂಡ್ಯನೇ ನಿನ್ನ ಹಡಗು ಸಮುದ್ರಕ್ಕೆ ಇಳಿಯಬೇಕಾದರೆ ನನಗೊಂದು ನರಾಹುತಿ ಕೊಡು ಇಲ್ಲವಾದರೆ ಸರ್ವಥಾ ಬಿಡಲಾರೆನೆಂದು ಹಡಗಿನೊಳಗಿನಿಂದ ಕೇಳಿಸಿತು. ಅಷ್ಟರಲ್ಲಿ ದೇವ ಪಾಂಡ್ಯನು ಮಿತ್ರನಾದ ನಾರಾಯಣ ಪಾಂಡ್ಯನನ್ನು ನೋಡಿ ಇದಕ್ಕೆ ಮಾಡಬೇಕಾದ ಉಪಾಯವೇನೆಂದು ಕೇಳಲು ಎಲೈ ದೇವಪಾಂಡ್ಯನೇ ನಮ್ಮ ಕೆಲಸಕ್ಕೆ ಯಾರನ್ನಾದರೂ ಬಲಿಕೊಡುವುದು ಸರಿಯಲ ; ಈಗ ನಿನ್ನ ಏಳು ಜನ ಮಕ್ಕಳಲ್ಲಿ ಒಬ್ಬನನ್ನು ಬಲಿಕೊಡುವುದು ನ್ಯಾಯವೆಂದು ನನಗೆ ತೋರುತ್ತದೆ. ಆದ್ದರಿಂದ ಮನೆಗೆ ಹೋಗಿ ಶಿವ ದೇವಿಯೊಡನೆ ಕೇಳಿ ಒಬ್ಬನನ್ನು ಬಲಿಕೊಡು ಆಗ ಹಡಗು ಸಮುದ್ರಕ್ಕೆ ಇಳಿಯುತ್ತದೆ.

ಮನೆಗೆ ಬಂದು ವಾಸ್ತವ ಸಂಗತಿಯನ್ನು ಶಿವದೇವಿಯಲ್ಲಿ ಹೇಳಿದಾಗ ನಾನು ನನ್ನ ಮಕ್ಕಳನ್ನು ಕರೆದುಕೊಂಡು ತೌರು ಮನೆಗೆ ಹೋಗುತ್ತೇನೆ.ನಿಮ್ಮ ಬದುಕು ಬಾಗ್ಯ ಇಲ್ಲದಿದ್ದರೂ ಮಕ್ಕಳಿದ್ದರೆ ಕೂಲಿಯಿಂದ ದಿನ ಹರಣ ಮಾಡುವೆನಲ್ಲದೆ ಸರ್ವಥಾ ಮಕ್ಕಳನ್ನು ಕೊಡಲಾರೆ ಎಂದು ಹೇಳಿ ಮರುದಿವಸ ತಾಯಿ ಮನೆಗೆ ಹೋಗುತ್ತಾಳೆ.

ಇದನ್ನು ಕೇಳಿದ ದೇವ ಪಾಂಡ್ಯ ಅತೀವ ದುಃಖದಲ್ಲಿರುತ್ತಾನೆ. ಅಣ್ಣನ ಸಂಕಟವನ್ನು ತಿಳಿದ ತಂಗಿ ಸತ್ಯವತಿ ತನ್ನ ಮಗನನ್ನು ಕೊಡಲು ತೀರ್ಮಾನಿಸುತ್ತಾಳೆ. ಬಲಿ ಕೊಡುವುದಕ್ಕೆ ಸಿದ್ಧವಾದಾಗ ಕುಂಡೋದರ ಬೂತವು ಈ ಬಾಲಕನನ್ನು ನೋಡಿ ಇವನು ತನ್ನನು ಆರಾಧಿಸುವ ಭೂತ ಪಾಂಡ್ಯನ ವಂಶದವನೆಂದು ತಿಳಿದು ಈತನನ್ನು ಬಲಿ ತೆಗೆದುಕೊಳ್ಳುವು ಸರಿಯಲ್ಲವೆಂದು ಬೂತವು ಪ್ರತ್ಯಕ್ಷವಾಗಿ– ದೇವ ಪಾಂಡ್ಯನೇ ಈ ಬಾಲಕನನ್ನು ನೀನು ಬಲಿಕೊಡುವುದು ಅಗತ್ಯವಿಲ್ಲ. ನಿನ್ನ ಹಡಗು ಸಮುದ್ರಕ್ಕೆ ಇಳಿಯುವುದು. ಇವನನ್ನು ನಾನು ರಾಜಾಧಿರಾಜನನ್ನಾಗಿ ಮಾಡುವೆನು ಎಂದು ಹೇಳಿತು. ಆ ಪ್ರಕಾರವಾಗಿ ಹಡಗಿನಲ್ಲಿ ವ್ಯಾಪಾರ ಆರಂಭವಾಯಿತು. ಜಯ ಪಾಂಡ್ಯ ಮುಂದೆ ಭೂತಾಳ ಪಾಂಡ್ಯನಾಗಿ ಪಾರ್ಥಿವ ಸಂವತ್ಸರದ ಪಾಲ್ಗುಣ ಬಹುಳ ಪಂಚಮಿಯ ಸೂರ್ಯೋದಯಕ್ಕೆ ಸರಿಯಾಗಿ ಮೀನ ಲಗ್ನದಲ್ಲಿ ತುಳು, ಮಲೆಯಾಳ, ಹೈಗ ಕರ್ನಾಟಕ ದೇಶದ ಜನರ ಮುಂದೆ ಈ ಕಟ್ಟನ್ನು ಘೋಷಿಸುತ್ತಾನೆ.ಆಗ ಅಲ್ಲಿ ಸೇರಿದವನೊಬ್ಬನ ಮೇಲೆ ಭೂತ ರಾಜನು ಆವಹನೆಯಾಗಿ–ಅರಸರು ಮತ್ತು ಪರಿವಾರಗಳು ಇನ್ನು ಮುಂದೆ ಒಂದೇ ಕಟ್ಟನ್ನು ಆಚರಿಸಬೇಕು.ಹಾಗೆಯೇ ನಡೆಯುತ್ತೇವೆ ಎಂದು ಮಾತು ನೀಡಿದರೆ ಈ ಸಂಗತಿಯನ್ನು ನಿಮಗೆ ವಿವರವಾಗಿ ತಿಳಿಸುತ್ತೇನೆ. ಎಲೈ ದೇವ ಪಾಂಡ್ಯನೇ ನಿನ್ನ ಎಲ್ಲಾ ಬದುಕು ಭಾಗ್ಯಕ್ಕೆ ನಿನ್ನ ಅಳಿಯನಾದ ಭೂತಾಳ ಪಾಂಡ್ಯನು ಹಕ್ಕುದಾರನಾಗುತ್ತಾನೆ. ಆದ್ದರಿಂದ ಇನ್ನು ಮುಂದೆ ನನ್ನನ್ನು ನಂಬಿಕೊಂಡು ಬರುವ ನಿನ್ನ ಅಳಿಯನಾದ ಭೂತಾಳ ಪಾಂಡ್ಯನು ಹಕ್ಕುದಾರನಾಗುತ್ತಾನೆ. ಆದ್ದರಿಂದ ಇನ್ನು ಮುಂದೆ ನನ್ನನ್ನು ನಂಬಿಕೊಂಡು ಬರುವ ಎಲ್ಲರೂ ಅಳಿಯ ಸಂತಾನವನ್ನೇ ಅನುಸರಿಸಬೇಕು ಎಂದು ಆಜ್ಞೆಕೊಟ್ಟಿತು. (ಭೂತಾಳ ಪಾಂಡ್ಯನ ಕಟ್ಟುಕಟ್ಟಳೆಗಳು ; ಪು : ೧೭೯)

ಈ ಒಂದು ಘಟನೆಯ ನಂತರ ತುಳುನಾಡಿನಲ್ಲಿ ಅಳಿಯ ಸಂತಾನ ಕಟ್ಟು ಜಾರಿಗೊಂಡಿತು ಎಂದು ಹೇಳಲಾಗುತ್ತದೆ. ಇದೇ ರೀತಿಯ ಇನ್ನೊಂದು ಘಟನೆ ಉತ್ತರ ಕರ್ಣಾಟಕ ಭಾಗದಲ್ಲಿಯೂ ಲಭಿಸುತ್ತದೆ. "ತುಳುನಾಡಿನ ರಾಜನೊಬ್ಬ ವ್ಯಾಪಾರ ವ್ಯವಹಾರಕ್ಕಾಗಿ ದೊಡ್ಡ ಹಡಗನ್ನು ಕಟ್ಟಿಸಿ ಹಡಗನ್ನು ಸಮುದ್ರದಲ್ಲಿ ಪ್ರಯಾಣಿಸಲು ಹರಿಯಬಿಟ್ಟಾಗ ಹಡಗು ಮುಂದುವರಿಯಲಾರದೆ ನೆಲಕಚ್ಚಿತಂತೆ. ಆಗ ಜೋಯಿಸರನ್ನು ವಿಚಾರಿಸಲಾಗಿ ಅವರು ನರಬಲಿಯಾದ ಹೊರತು ಹಡಗು ಚಲಿಸದೆಂದು ಸೂಚಿಸಿದರು.ಆಗ ರಾಜ ಹೆರರ ಮಕ್ಕಳನ್ನು ನೀರಿಗೆ ಆಹುತಿ ಕೊಡುವ ತೀರ್ಮಾನ ಮಾಡದೆ ತನ್ನ ಐದು ಮಂದಿ ಮಕ್ಕಳಲ್ಲಿ ಒಬ್ಬನನ್ನು ಬಲಿಕೊಡುವ ತೀರ್ಮಾನವನ್ನು ಮಾಡಿ ತನ್ನ ಹೆಂಡತಿಗೆ ತಿಳಿಸಿದ. ಈ ಕಠೋರ ತೀರ್ಮಾನವನ್ನು ಹೆಂಡತಿ ಪ್ರತಿಭಟಿಸಿದಳು. ಆದರೂ ಗಂಡ ತನ್ನ ಪರಮಾಧಿಕಾರವನ್ನು ಚಲಾಯಿಸಿ ಮಗುವನ್ನು ಬಲಿಕೊಟ್ಟರೆ ಪ್ರಮಾದವೆಂದು ಆ ತಾಯಿ ವ್ಯಥೆಗೊಂಡು ಗಂಡನ ಕಣ್ಣು ತಪ್ಪಿಸಿ ರಾತ್ರಿಯ ಹೊತ್ತು ಐದು ಮಕ್ಕಳನ್ನು ಕರೆದುಕೊಂಡು ದೋಣಿ ಹತ್ತಿ ತುಳುನಾಡನ್ನು ತೊರೆದು ತನ್ನ ತವರೂರಾದ ಉತ್ತರಕನ್ನಡದ ಹಿರೇಗುತ್ತಿಗೆ ಬಂದು ನೆಲೆಸಿದಳಂತೆ. ಅವಳ ಸಂತಾನವೇ ಉತ್ತರಕನ್ನಡದ ನಾಡವರು. ಹೆಂಡತಿ ತನ್ನ ತೀರ್ಮಾನವನ್ನು ಧಿಕ್ಕರಿಸಿ ಕಣ್ಮರೆಯಾದುದನ್ನು ಕಂಡು ರಾಜ ಚಿಂತಾಕ್ರಾಂತನಾಗಿ ಮುಂಡು ಮುಸುಕು ಹಾಕಿ ಮಲಗಿದಾಗ ಅವನ ತಂಗಿ ಅಣ್ಣನೆಡೆಗೆ ಬಂದು ಅವನ ನೋವಿನ ಕಾರಣ ತಿಳಿದು ಅದನ್ನು ನಿವಾರಣೆ ಮಾಡಲು ತನ್ನ ಒಬ್ಬನೇ ಒಬ್ಬ ಮಗನನ್ನು ಬಲಿಕೊಡಲು ಸಿದ್ಧಳಾದಳು. ಸಮುದ್ರಕ್ಕೆ ಬಲಿಯಾಗುವ ಪೂರ್ವದಲ್ಲಿ ಹಡಗಿನ ಮೇಲೆ ಕುಳಿತು ತನ್ನ ಅಂತಿಮ ಬಯಕೆಯಾದ ಮಾವಿನ ಹಣ್ಣನ್ನು ಚಾಕುವಿನಿಂದ ಕೆತ್ತಿ ತಿನ್ನುವಾಗ ಬೆರಳು ಕತ್ತರಿಸಿ ರಕ್ತದ ಕೋಡಿ ಹರಿದು ಸಮುದ್ರದ ನೀರಿನಲ್ಲಿ ಬೆರೆತಿತು. ಅ ರಕ್ತಬಲಿಯ ಕಾರಣದಿಂದ ರಾಜನ ಹಡಗು ಸಮುದ್ರದಲ್ಲಿ ಮುಂದುವರಿಯುತ್ತದೆ. ತಂಗಿ ತನಗಾಗಿ ಮಗನನ್ನು ತ್ಯಾಗ ಮಾಡಲು ಸಿದ್ಧಳಾದುದರಿಂದ ಸಂಪ್ರೀತನಾದ ದೊರೆ ತನ್ನ ತಂಗಿಯ ಮಕ್ಕಳೇ ತನ್ನ ರಾಜ್ಯಕ್ಕೆ ವಾರಸುದಾರರಾಗಬೇಕೆಂದೂ ತನ್ನ ಮಕ್ಕಳಿಗೆ ರಾಜ್ಯದ ಹಕ್ಕಿಲ್ಲವೆಂದೂ ಶಾಸನವನ್ನು ಮಾಡಿದನಂತೆ. ಹೀಗಾಗಿ ರಾಜನ ತಂಗಿಯ ಮಕ್ಕಳಾದ ತುಳು

ನಾಡವರಿಗೆ ರಾಜ ಗದ್ದುಗೆ ದೊರಕಿ ಅವರು ಶ್ರೀಮಂತರಾಗಿ ತುಳುನಾಡು ತೊರೆದ ರಾಜ ಹೈಗ ನಾಡಿನ ನಾಡವರು ಬಡವರಾದರಂತೆ'' (ಡಾ.ಎನ್ ಆರ್ ನಾಯಕ್ : ೨೦೦೧ :ಪು ೧೫) ಮೇಲಿನ ಎರಡು ಘಟನೆಗಳು ಜರಗಿದ ಸ್ಥಳ ಒಂದೇ ಆಗಿರಬೇಕು. ಅಂದರೆ ಉತ್ತರಕನ್ನಡ ಮತ್ತು ಅವಿಭಜಿತ ದಕ್ಷಿಣ ಕನ್ನಡದ ಗಡಿ ಭಾಗದಲ್ಲಿ ನಡೆದಂತೆ ತಿಳಿದು ಬರುತ್ತದೆ. ಬಹುಶಃ ಆ ಭಾಗದಿಂದ ದಕ್ಷಿಣ ಕನ್ನಡಕ್ಕೆ ವಲಸೆ ಬರುವವರ ಸಂಖ್ಯೆ ಆ ಕಾಲದಲ್ಲಿ ಹೆಚ್ಚಾಗಿರಬೇಕು. ಆ ಪ್ರದೇಶದ ಜನರಿಗೆ ಸಂದಿಗ್ಧ ಪರಿಸ್ಥಿತಿ ಒದಗಿರಬೇಕು. ಅದನ್ನು ನಿವಾರಿಸಲು ಈ ರೀತಿಯ ಘಟನೆಗಳು ಸಹಾಯಕವಾಗಬಹುದೆನ್ನುವ ನಿಲುವಿನಲ್ಲಿ ಘಟನೆಯೊಂದನ್ನು ಸೃಷ್ಟಿಸಿ ಕೌಟುಂಬಿಕ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ಪ್ರಯತ್ನಿಸಿರಬೇಕು.

**ಭೂತಾಳ ಪಾಂಡ್ಯರಾಯನ ಹದಿನಾರು ಕಟ್ಟಳೆಗಳು**

ಹಡಗಿಗೆ ಬಲಿಕೊಡಲು ಮಗನನ್ನು ಕೊಡಲು ನಿರಾಕರಿಸಿದಾಗ ತಂಗಿ ತನ್ನ ಮಗನನ್ನು ತ್ಯಾಗ ಮಾಡಲು ಸಿದ್ಧವಾದುದಕ್ಕಾಗಿ ಅಳಿಯ ಸಂತಾನ ಕಟ್ಟನ್ನು ಎಲ್ಲರೂ ಪಾಲಿಸಬೇಕು ಎಂಬ ಭೂತದ ಮೂಲಕ ಅಜ್ಞೆಯೊಂದನ್ನು ಹೊರಡಿಸುತ್ತಾನೆ. ಆಗ ಕೇವಲ ಅಳಿಯಕಟ್ಟು ಎಂದು ಹೇಳಿದರೆ ಸಾಕಾಗುವುದಿಲ್ಲ : ಅದಕ್ಕೆ ನಿರ್ದಿಷ್ಟವಾದ ನೀತಿ ನಿಯಮಗಳು ಬೇಡವೇ ಎಂದು ಅಲ್ಲಿ ಸೇರಿದವರೆಲ್ಲಾ ಕೇಳುತ್ತಾರೆ. ಯಾಕೆಂದರೆ ಇದ್ದಕ್ಕಿದ್ದ ಹಾಗೆ ಒಂದು ನೂತನ ಪದ್ಧತಿಯನ್ನು ಪಾಲಿಸಲು ಸಾಧ್ಯವಿಲ್ಲ; ಮಾತ್ರವಲ್ಲ ಅದು ಸಾಮೂಹಿಕವಾಗಿ ಸ್ವೀಕೃತವಾಗಬೇಕಾದರೆ ಅದಕ್ಕೆ ಸ್ಪಷ್ಟವಾದ ನಿಯಮಗಳಿರಬೇಕು. ಈ ಸಂಶಯವನ್ನು ಪರಿಹರಿಸುವ ನಿಟ್ಟಿನಲ್ಲಿ ಮುಂದೆ ಎಲ್ಲರಿಗೂ ಅನ್ವಯವಾಗುವಂತೆ ೧೬ ಕಟ್ಟಳೆಗಳನ್ನು ಭೂತಾಳ ಪಾಂಡ್ಯ ಬರೆಸಿದ ಎನ್ನುವುದು ಪ್ರತೀತಿ. ಆದರೆ, ಕಟ್ಟಳೆಗಳ ವಿವಿಧ ಹಂತಗಳನ್ನು ನೋಡುವಾಗ ಅವೆಲ್ಲವನ್ನು ಒಂದೇ ದಿನದಲ್ಲಿ ಮಾಡಿ ಮುಗಿಸಿದ ಹಾಗೆ ಕಂಡು ಬರುವುದಿಲ್ಲ. ಅಥವಾ ಈ ಒಂದು ಕತೆಯ ಸೃಷ್ಟಿಯ ಕಾಲಕ್ಕೆ ದೇವ ಪಾಂಡ್ಯನೇ ಅದಕ್ಕೊಂದು ಚೌಕಟ್ಟನ್ನು ಕೊಟ್ಟು, ಘಟನೆ ನಡೆಯಿತು ಎಂದು ಈಗ ಎಲ್ಲರು ತಿಳಿದುಕೊಳ್ಳುವ ದಿನ ಅದನ್ನು ಪ್ರಕಟಗೊಳಿಸಿರಬೇಕು ಎನ್ನುವುದು ಸ್ಪಷ್ಟವಾಗುತ್ತದೆ. ಇಲ್ಲದಿದ್ದರೆ ಇಷ್ಟು ವ್ಯವಸ್ಥಿತವಾಗಿ ಸರ್ವ ಕಾಲೀನ ಪದ್ಧತಿಯೊಂದನ್ನು ಅಳವಡಿಸಲು ಸಾಧ್ಯವಿಲ್ಲ.

ತುಳುನಾಡಿನ ಕುಟುಂಬ ವ್ಯವಸ್ಥೆಯ ಹಿನ್ನೆಲೆಯಲ್ಲಿ ಭೂತಾಳ ಪಾಂಡ್ಯನ ಅಳಿಯಕಟ್ಟಿನ ನಿಯಮಗಳಲ್ಲಿ ಕೆಲವು ಪ್ರತ್ಯಕ್ಷವಾಗಿ, ಇನ್ನು ಕೆಲವು ಪರೋಕ್ಷವಾಗಿ ಕಾಣಿಸಿಕೊಳ್ಳುತ್ತವೆ. ಆದುದರಿಂದ ಪಾಡ್ದನದಲ್ಲಿ ವ್ಯಕ್ತವಾಗುವ ಕೌಟುಂಬಿಕ ಅಂಶಗಳನ್ನು ಗುರುತಿಸುವ ಮೊದಲು ಕಟ್ಟು ಕಟ್ಟಳೆಗಳ ಮೇಲೆ ಕಣ್ಣಾಡಿಸುವುದು ಪ್ರಸ್ತುತ ಎನಿಸುತ್ತದೆ. ಪಾಡ್ದನಗಳಲ್ಲಿ ಕಂಡು ಬರುವ ಅಂಶಗಳಿಗೂ ಅದು ತುಳುನಾಡಿನಲ್ಲಿ 'ಅಳಿಯಕಟ್ಟು' ಎಂಬ ನೆಲೆಯಲ್ಲಿ ಅಸ್ತಿತ್ವದಲ್ಲಿರುವ ಅಂಶಗಳಿಗೂ ವ್ಯತ್ಯಾಸವಿದೆ. ಭೂತಾಳ ಪಾಂಡ್ಯನ ಮೂಲಕ ಘೋಷಣೆಯಾಗಿರುವ ಕಟ್ಟುಗಳ ನೇರ ಅಭಿವ್ಯಕ್ತಿ ಪಾಡ್ದನಗಳಲ್ಲಿ ಕಂಡು ಬರುವುದಿಲ್ಲ. ಮಾತ್ರವಲ್ಲ, ಪಾಡ್ದನಗಳು ಎಲ್ಲಿಯೂ ಕೂಡಾ 'ಅಳಿಯಕಟ್ಟು' ಎನ್ನುವ ಪದಪ್ರಯೋಗವನ್ನು ಮಾಡುವುದಿಲ್ಲ, ಪಾಡ್ದನಕಾರ ಅಥವಾ ಪಾಡ್ದನಕಾರ್ತಿ ತನ್ನ ಮುಂದಿರುವ ಸಾಮಾಜಿಕ ಮತ್ತು ಕೌಟುಂಬಿಕ ವ್ಯವಸ್ಥೆಯ ಯಥಾವತ್ ನಿರೂಪಣೆಯನ್ನು ಮಾಡಲು ಪ್ರಯತ್ನಿಸಿದ್ದಾರೆ ಎಂದು ಹೇಳಬಹುದು. ಇವರ ಸಾಹಿತ್ಯದ ಕಲ್ಪನೆಯ ಹಿಂದೆ ಭೂತಾಳ ಪಾಂಡ್ಯನ ಕಟ್ಟುಗಳ ಪರಿಚಯ ಮತ್ತು ಪ್ರಭಾವ ಇತ್ತೇ ಎನ್ನುವುದನ್ನು ಒಂದೇ ಮಾತಿನಲ್ಲಿ ಹೇಳಲು ಸಾಧ್ಯವಿಲ್ಲ. ಅಂಗೀಕೃತವಾಗಿರುವ ತಾನು ಮನೆಯಲ್ಲಿ ಅಥವಾ ತನ್ನ ಕುಟುಂಬದಲ್ಲಿ ಅನುಸರಿಸುವ ವಿಧಾನಗಳ ಪರಿಚಯವನ್ನು ಪ್ರಜ್ಞಾಪೂರ್ವಕವಾಗಿ ನೀಡಲು ಶ್ರಮಿಸಿದ್ದಾರೆ.

ಮಾತೃಪ್ರಧಾನ ಮತ್ತು ಅಳಿಯಕಟ್ಟು ಇವುಗಳಲ್ಲಿ ಯಾವುದು ಮೊದಲು ಯಾವುದು ನಂತರ ಎನ್ನುವ ಜಿಜ್ಞಾಸೆ ಇನ್ನೂ ಇದೆ. ಯಾವುದು ಯಾವುದಕ್ಕೆ ಪೂರಕ ಅಥವಾ ಪ್ರೇರಕ ಎಂಬ ವಿಷಯದ ಕುರಿತು ಚರ್ಚೆ ನಡೆಯುತ್ತಲೇ ಇದೆ. ಈ ದೃಷ್ಟಿಯಿಂದ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಮತ್ತು ಭೂತಾಳ ಪಾಂಡ್ಯನ ಅಳಿಯಕಟ್ಟು ಇವುಗಳನ್ನು ಪರಸ್ಪರ ಎದುರು ಬದುರಾಗಿಟ್ಟುಕೊಂಡು ಅಧ್ಯಯನಕ್ಕೆ ಒಳಪಡಿಸುವ ಅಗತ್ಯವಿದೆ. ಪಾಡ್ದನಗಳು ಮತ್ತು ಭೂತಾಳ ಪಾಂಡ್ಯನ ಕಟ್ಟು ಕಟ್ಟಳೆಗಳನ್ನು ಪರಸ್ಪರ ತೌಲನಿಕವಾಗಿ ನೋಡಲು ಸಾಧ್ಯವಾಗುವಂತೆ ಆತನ ಕಟ್ಟಳೆಗಳನ್ನು ಈ ಕೆಳಗೆ ನೇರವಾಗಿ ಕೊಡಲಾಗಿದೆ. ಅಳಿಯ ಕಟ್ಟನ್ನು ಘೋಷಿಸುವ ಸಂದರ್ಭದಲ್ಲಿ ಅಲ್ಲಿ ಸೇರಿರುವ ಜನ ತಮ್ಮದೇ ಆದ ಸಂಶಯಗಳನ್ನು ನಿವೇದಿಸಿಕೊಂಡಾಗ ವಿವಿಧ ಕಟ್ಟಳೆಗಳನ್ನು ಸಾರಲಾಯಿತು ಎಂದು ತಿಳಿದಿಬರುತ್ತದೆ.

ಈ ಅಳಿಯ ಸಂತಾನದಲ್ಲಿ ಒಂದು ಕುಟುಂಬಕ್ಕೆ ಒಂದೇ ಹೆಣ್ಣಾಗಿ ಆಕೆಯ ಗಂಡ ಸತ್ತರೆ ಮುಂದೆ ಸಂತಾನವೃದ್ಧಿ ಹೇಗೆಂದು ಸಭೆಯವರು ಕೇಳಲು, ಅದಕ್ಕೆ ಭೂತಾಳಪಾಂಡ್ಯರಾಯನು ೧೬ ಕಟ್ಟಳೆಗಳನ್ನು ಬರೆಸಿದ ವಿವರ ಹೀಗಿದೆ.

**ಒಂದನೇ ಕಟ್ಟಳೆ**

ಅಳಿಯ ಸಂತಾನದ ಕಟ್ಟಿನಲ್ಲಿ ಹೆಣ್ಣು ನೆರೆಯುವುದಕ್ಕಿಂತ ಮುಂಚೆ ಮದುವೆ ಮಾಡಿಕೊಟ್ಟಲ್ಲಿ ಗಂಡ ಸತ್ತುಹೋದರೆ ಅವಳಿಗೆ 'ಬುಡವಳತಿ' ಎಂಬ ಹೆಸರು. ಅವಳಿಗೆ ಎರಡನೇ ಉಡಿಗೆ ಕೊಡಬಹುದು. ಆದರೆ ಅದಕ್ಕೆ ತಂದೆ ತಾಯಿಗಳಿಗೆ ಹಕ್ಕಿಲ್ಲ. ಮಾವ ಮೊದಲಾದ ಕುಟುಂಬದವರು ಮತ್ತೋರ್ವನಿಗೆ ಕೊಡಬಹುದು. ನೆರೆಯದ ಕನ್ಯಾಹೆಣ್ಣಿಗೆ ಒಂದೇ ಧಾರೆಯಲ್ಲದೆ ಎರಡಾವರ್ತಿ ಧಾರೆ ಮಾಡಕೂಡದು. ತಂದೆ ತಾಯಿಗಳು ಕನ್ಯಾ ಹೆಣ್ಣಿಗೆ ಧಾರೆಎರೆಯುವಾಗ ಧಾರೆ ಗಿಂಡಿ ಮುಟ್ಟುವುದು ಮಾತ್ರವಲ್ಲದೆ, ಧಾರಾಪೂರ್ವಕವಾಗಿ ಕೊಡಕೂಡದು ಎಂಬುದೇ ೧ನೇ ಕಟ್ಟಳೆ.

**ಎರಡನೇ ಕಟ್ಟಳೆ**

ಮದುವೆಯಾದ ಹೆಣ್ಣು ಗಂಡನ ಮನೆಗೆ ಹೋದಲ್ಲಿ ಗಂಡನ ಮತ್ತು ಗಂಡನಿಗಿಂತ ಹಿರಿಯವರು ಅಂದರೆ, ಆತನ ತಂದೆತಾಯಿಯವರು, ಅಣ್ಣಂದಿರು, ಅಕ್ಕಂದಿರು, ಗುರುಹಿರಿಯರ ಹೆಸರುಗಳನ್ನು ಹೇಳಬಾರದು ಮತ್ತು ಗಂಡನ ಅಣ್ಣಂದಿರನ್ನು ಮುಟ್ಟಬಾರದು, ಅವರ ಎದುರು ನಿಂತು ಮಾತನಾಡಬಾರದು. ಭಯಭಕ್ತಿಗಳಿಂದ ನಡೆಯತಕ್ಕದ್ದು. ಈ ಹೆಣ್ಣಿಗೆ ಗಂಡ ಸತ್ತರೆ ಮತ್ತೋರ್ವನಿಗೆ ಉಡಿಗೆ ಕೊಡುವ ಮೊದಲು ಆಕೆ ಬಸುರಾದರೆ, ಸರಿಜಾತಿಯವನಾದರೆ ಅವನ ಕೈಯಿಂದ ಅಪರಾಧ ತಕ್ಕೊಂಡು ಆ ಹೆಣ್ಣನ್ನು ಅವನಿಗೆ ಬುಡುಧಾರೆ ಎಂದು ಕೊಡಬಹುದೆಂಬುದೇ ೨ನೇ ಕಟ್ಟಳೆ.

**ಮೂರನೇ ಕಟ್ಟಳೆ**

ಮೇಲೆ ಬರೆದಂತೆ ಆ ಹೆಣ್ಣಿಗೆ ಮೇಲು ಜಾತಿಯವನಿಂದ ಗರ್ಭವಾದರೆ ಅವಳನ್ನು ಆತನಿಗೆ ಇಡಿಸಿಕೊಡಬಹುದು. ಆಗ ಆತನಿಂದ ಒಂದು ತೊಡಿಗೆ (ಸೀರೆ) ತೆಗೆದುಕೊಳ್ಳಬೇಕು. ಹೀನ ಜಾತಿಯವನಾದರೆ ಆ ಕೀಳು ಜಾತಿಯವನಿಗೆ ಅಪರಾಧ ಮಾಡಿ ಮುಖ್ಯಸ್ಥರು ಸ್ಥಾನಮಾನದವರು ಅಥವಾ ದಳ್ವಾಲರು ಆ ಹೆಣ್ಣನ್ನು ವಿಕ್ರಯ ಮಾಡಬಹುದು ಎಂಬುದೇ ೩ನೇ ಕಟ್ಟಳೆ.

**ನಾಲ್ಕನೇ ಕಟ್ಟಳೆ**

ಮದುವೆಯಾದ ಹೆಣ್ಣನ್ನು ಗಂಡನು ಬಿಟ್ಟು ದೇಶಾಂತರಕ್ಕೆ ಹೋಗಿ ಐದು ವರುಷಗಳ ವರೆಗೂ ಬಾರದೇ ಇದ್ದು ಅವನ ವರ್ತಮಾನಗಳೂ ಸಹಾ ಇಲ್ಲದೆ ಹೋದರೆ ಮಾವ ಮೊದಲಾದ

ಸಂತಾನದವರು ಐದು ವರುಷಗಳ ಮೇಲೆ ಮತ್ತೊಬ್ಬನಿಗೆ ಉಡಿಗೆ ಕೊಡಿಸಬಹುದು. ಅವನು ಬರುವ ನಿಜವಾದ ವರ್ತಮಾನವಿದ್ದರೆ ಉಡಿಗೆ ಕೊಡಿಸಕೂಡದೆಂಬುದೇ ೪ನೇ ಕಟ್ಟಳೆ.

**ಐದನೇ ಕಟ್ಟಳೆ**

ಆ ಹೆಣ್ಣು ಗಂಡನಿಲ್ಲದ ಸಮಯದಲ್ಲಿ ಬಸುರಾದರೆ, ಉತ್ತಮ ಜಾತಿಯವನಾದರೆ ಗಂಡನನ್ನು ಬಿಡಿಸಿ, ಆತನಿಗೆ ಇಡಕೊಡಬಹುದು. ಸರಿ ಜಾತಿಯವನಾದರೆ ಅವಳಿಗೆ ಮತ್ತು ಅವನಿಗೆ ಅಪರಾಧ ಮಾಡಿ ಇಡಿಸಿಕೊಡಬಹುದು. ಹೀನ ಜಾತಿಯವನಾದರೆ ಆತನಿಗೆ ಅಪರಾಧ ಮಾಡಿ ಅವಳನ್ನು ಆತನ ಜಾತಿಗೆ ಕೂಡಿಸಿಕೊಟ್ಟು ಅವಳಿಗೆ ಉತ್ತರಕ್ರಿಯೆ ಮಾಡಬಹುದೆಂಬುದೇ ೫ನೇ ಕಟ್ಟಳೆ.

**ಆರನೇ ಕಟ್ಟಳೆ**

ಈ ಅಳಿಯ ಸಂತಾನದ ಹೆಣ್ಣುಗಳಿಗೆ ಮದುವೆಯಾಗಿ ಮೂರು ನಾಲ್ಕು ಮಕ್ಕಳಾದ ಮೇಲೆ ಗಂಡನು ದೇಶಾಂತರಕ್ಕೆ ಹೋದ ಮೇಲೆ ಆ ಹೆಣ್ಣನ್ನು ಬೇರೊಬ್ಬನಿಗೆ ಉಡಿಗೆ ಕೊಡಕೂಡದು. ಅವಳು ಸರಿ ಜಾತಿಯವನ ಜೊತೆ ಕೂಡಿ ಗಂಡ ಬರುವುದರೊಳಗೆ ಬಸುರಾದರೆ ಅವಳಿಗೆ ಉಡಿಗೆ ಕೊಡದೆ ಜಾತಿಯಿಂದ ತೆಗೆದು ಹಾಕಿ ಅವಳ ಮುಂಚಿನ ಮಕ್ಕಳನ್ನು ಕುಟುಂಬದವರು ತೆಗೆದು ಕೊಳ್ಳಬಹುದು ಎಂಬುದು ೬ನೇ ಕಟ್ಟಳೆ.

**ಏಳನೇ ಕಟ್ಟಳೆ**

ಮದುವೆಯಾದ ಹೆಣ್ಣು ಗಂಡನ ಮನೆಯಲ್ಲಿ ವ್ಯಭಿಚಾರ ಮಾಡಿದ್ದನ್ನು ಗಂಡನು ಕಂಡರೆ ಅವಳ ತವರುಮನೆಯವರನ್ನು ಬರಹೇಳಿ ಅವರಿಗೆ ಒಪ್ಪಿಸಬಹುದು. ಅನಂತರ ಅವರು ಈ ಹೆಣ್ಣನ್ನು ಮತ್ತೊಬ್ಬನಿಗೆ ಉಡಿಗೆ ಕೊಡಬಹುದು. ಗಂಡನು ತನ್ನ ಹೆಂಡತಿಯನ್ನು ಕೂಡಿಕೊಳ್ಳದೆ ಮತ್ತೋರ್ವಳನ್ನು ಕೂಡಿಕೊಂಡು ಇವಳನ್ನು ಸರಿಯಾಗಿ ನೋಡದೇ ಇದ್ದರೆ ಸಂತಾನದವರು ಇವಳನ್ನು ಗಂಡನಿಂಡ ಬರಹೇಳಿ ಮತ್ತೊಬ್ಬನಿಗೆ ಉಡಿಗೆ ಕೊಡಬಹುದು. ಮತ್ತು ಹೆಂಡತಿಯನ್ನು ಬೈದು, ಬಡಿದು ವಿಧ ವಿಧದ ಉಪದ್ರವಗಳನ್ನು ಕೊಟ್ಟರೆ ಮೂರು ನಾಲ್ಕು ಸಾರಿ ವಿವೇಕ ಮಾಡಿಸಬಹುದು ಮತ್ತು ಅವರೊಳಗೆ ಸರಿಯಾಗಿ ನಡೆಯದಿದ್ದರೆ ಅವಳ ಸಂತಾನದವರು ಆ ಗಂಡನಿಂದ ಬರಹೇಳಿಸಿ ಬೇರೊಬ್ಬನಿಗೆ ಉಡಿಗೆ ಕೊಡಬಹುದೆಂಬುದೇ ೭ನೇ ಕಟ್ಟಳೆ.

**೮ ಎಂಟನೇ ಕಟ್ಟಳೆ**

ಮದುವೆಯಾಗುವ ಮೊದಲು ಹೆಣ್ಣಿಗೆ ಬಸುರು ಬಂದರೆ ಉತ್ತಮ ಜಾತಿಯವನಾದರೆ, ಅವನಿಗೆ ಮತ್ತು ಅವಳಿಗೆ ಕೂಡಾ ತಪ್ಪು ಕಟ್ಟಿಸಿ ಇಡಿಸಿ ಕೊಡಬಹುದು. ಜಾತಿಯವನಾದರೆ ಮದುವೆಮಾಡಿ ಕೊಡಬಹುದು ಹೀನ ಜಾತಿಯವನಾದರೆ, ಅವಳನ್ನು ಜಾತಿಯಿಂದ ತೆಗೆದುಬಿಡಬೇಕೆಂಬುದೆ ೮ನೇ ಕಟ್ಟಳೆ.

**೯ನೇ ಕಟ್ಟಳೆ**

ನೆರೆದಂಥ ಹೆಣ್ಣು ಮದುವೆಯಾಗುವ ಮೊದಲು ಯಾರನ್ನಾದರೂ ಕೂಡಿಕೊಂಡು ಓಡಿಹೋದರೆ, ಸರಿ ಜಾತಿಯವನಾದರೆ ಮದುವೆ ಮಾಡಿಕೊಡಬಹುದು. ಮೇಲು ಜಾತಿಯವನಾಗಲಿ ಕೀಳು ಜಾತಿಯವನಾಗಲಿ ಜಾತಿಯಿಂದ ತೆಗೆದು ಬಿಡಬೇಕೆಂಬುದೇ ೯ನೇ ಕಟ್ಟಳೆ.

**ಹತ್ತನೇ ಕಟ್ಟಳೆ**

ಮದುವೆಯಾದ ಹೆಣ್ಣು ಗಂಡನನ್ನು ಬಿಟ್ಟು ಸರಿಜಾತಿಯವನನ್ನು ಕೂಡಿ ಓಡಿ ಹೋದರೆ ಆತನಿಗೆ ಉಡಿಗೆ ಕೊಡಬಹುದು. ಮೇಲು ಜಾತಿಯವನಾದರೆ ಇಡಿಸಬಹುದು. ಕೀಳು ಜಾತಿಯವನಾದರೆ ಜಾತಿಯಿಂದ ತೆಗೆದು ಬಿಡಬೇಕು. ಕ್ಷತ್ರಿಯರ ಹೆಣ್ಣಾದರೆ ಕ್ಷತ್ರಿಯರವರಿಗೆ ಮತ್ತು ಬ್ರಾಹ್ಮಣರಿಗೆ ವಿವಾಹ ಮಾಡಿಸಿಕೊಡಬಹುದು, ಬೇರೆ ಜಾತಿಯಾದರೆ, ಜಾತಿಯಿಂದ ತೆಗೆಯಬೇಕೆಂಬುದೇ ೧೦ನೇ ಕಟ್ಟಳೆ.

**ಹನ್ನೊಂದನೇ ಕಟ್ಟಳೆ**

ಜೈನ ಮತ್ತು ಮಾಸಾದಿಕ ಜೈನ ಜಾತಿಯ ಹೆಣ್ಣು ಮೇಲೆ ಹೇಳಿದ ಪ್ರಕಾರ ಬಸುರಾದರೆ, ಅದು ಸರಿಜಾತಿಯವನಿಗಾದರೆ ಆತನಿಗೆ ಕೂಡಿಸಿ ಕೊಡಬಹುದು, ಮೇಲು ಜಾತಿಯಾಗಲೀ ಹೀನ ಜಾತಿಯಾಗಲೀ ಆದರೆ ಅವಳನ್ನು ಜಾತಿಯಿಂದ ಬಿಟ್ಟು ಬಿಡಬೇಕು ಮತ್ತು ಜಾತಿಯಿಂದ ಹೋದವರಿಗೆ ಸರಿಯಾದ ಹಕ್ಕು ಸಿಕ್ಕಲಾರದು ಎಂಬುದೇ ೧೧ನೇ ಕಟ್ಟಳೆ.

**ಹನ್ನೆರಡನೇ ಕಟ್ಟಳೆ**

ಮಲವರ ಜಾತಿ ಹೆಣ್ಣುಗಳಿಗೆ ಬರಹೇಳಿಸುವರೆ ಕೂಡದು. ಆ ಹೆಣ್ಣು ಗಳು ಸರಿಜಾತಿಯಾಗಲೀ ಮೇಲು ಜಾತಿ ಯಾಗಲೀ ಕೂಡಿ ಗರ್ಭಿಣಿಯಾದರೆ ಅವಳನ್ನು ಇಡಿಸಿ ಕೊಡಬಹುದು. ಹೀನ ಜಾತಿಯವನಾದರೆ ಜಾತಿಯಿಂದ ತೆಗೆದುಬಿಡಬೇಕು ಎಂಬುದೇ ೧೨ನೇ ಕಟ್ಟಳೆ.

**ಹದಿಮೂರನೇ ಕಟ್ಟಳೆ**

ನಾಯಿಮಾರರ, ನಾಯರ ಈ ಜಾತಿಗಳಿಗೆ ಕನ್ಯಾಲಗ್ನ ಹೊರತು ಎರಡನೇ ಉಡಿಗೆ ಕೊಡಿಸ ಕೂಡದು. ಮೇಲು ಜಾತಿಯವರನ್ನು ಕೂಡಿ ಬಸುರಾದರೆ ಇಡಿಸಿ ಕೊಡಬಹುದು. ಕದಂಬಜಾತಿ, ಕಮ್ಮಾರ, ಬಳ್ಳಾಲ ಜಾತಿಯಾದರೆ ಸ್ವಜಾತಿ ಕಲ್ಯಾಣ ಅಥವಾ ಕ್ಷತ್ರಿಯ ಬ್ರಾಹ್ಮಣರಿಗೆ ಇಡಿಸಿ ಕೊಡ ಬಹುದು. ಹೀನ ಜಾತಿಯವನಾದರೆ ಜಾತಿಯಿಂದ ಅವಳನ್ನು ತೆಗೆದು ಬಿಡಬೇಕೆಂಬುದೇ ೧೩ನೇ ಕಟ್ಟಳೆ.

**ಹದಿನಾಲ್ಕನೇ ಕಟ್ಟಳೆ**.

ಸ್ಥಾನಿಕರಿಗೆ, ಅಂಬಲವಾಸಿಗಳಿಗೆ ಕನ್ಯಾಲಗ್ನ ಹೊರತು ಎರಡನೇ ಉಡಿಗೆ ಕೊಡಿಸಕೂಡದು. ಸ್ವಜಾತಿ, ಬ್ರಾಹ್ಮಣಜಾತಿಯಾದರೆ ಕೂಡಿಸಿ ಕೊಡಬಹುದು. ಈ ಜಾತಿಯವರಿಗೆ ಬ್ರಾಹ್ಮಣರ ಮೂಲಕ ಧಾರೆ ಎರೆದು ಕೊಡಬಹುದು. ಬೇರೆಯವನಿಂದ ಗರ್ಭವಾದರೆ ಅವಳನ್ನು ಜಾತಿಯಿಂದ ತೆಗೆದು ಹಾಕತಕ್ಕದ್ದು. ಇದು ೧೪ನೇ ಕಟ್ಟಳೆ.

**ಹದಿನೈದನೇ ಕಟ್ಟಳೆ**

ಪದಾರ್ತಿ (ಮಾರಾರ್) ಹೊರೆ ಪೊದುವಾಳ (ಮಾರವರ್) ಈ ಎರಡು ಜಾತಿಯವನಿಂದ ಗರ್ಭ ನಿಂತರೆ ಅವನಿಂದ ಅವಳಿಗೆ ಉಡಿಗೆ ಕೊಡಿಸಬಹುದು. ಮೇಲು ಜಾತಿಯವನಾದರೆ ಆತನಿಂದ ತೊಡಿಗೆ ತಕ್ಕೊಂಡು ಇಡಿಸಿಕೊಡಬಹುದು. ಕೀಳು ಜಾತಿಯವನಾದರೆ ಅವಳನ್ನು ಜಾತಿಯಿಂದ ಬಿಟ್ಟು ಬಿಡಬೇಕು. ಈ ಜಾತಿಗಳಿಗೆ ಕನ್ಯಾಲಗ್ನ ಮಾಡಬಹುದು. ಅದರೆ ಧಾರಾಪೂರ್ವದ ವಿವಾಹಗಳು ಕೂಡದು ಎಂಬುದೇ ೧೫ನೇ ಕಟ್ಟಳೆ.

**ಹದಿನಾರನೇ ಕಟ್ಟಳೆ**.

ಅರಸು ಬಲ್ಲಾಳರುಗಳಾದರೆ ಬ್ರಾಹ್ಮಣಧಾರೆ ಮಾಡಿಕೊಡಬಹುದು ಆತನು ಮಕ್ಕಳಿಗೆ ಅನ್ಯತವಾಗಿ ಕೊಡುವುದರಿಂದ ಕಂಭಕುಂಭಾದಿಗಳಿಂದ ಧಾರೆ ಎರೆದು ಚತುರ್ಥಿ ವಿವಾಹಗಳು ಮಾಡಬಹುದು. ಅರಸುಗಳಲ್ಲಿ ಅನ್ಯತವಾಗಿ ಕೊಡಲಿಕ್ಕೆ ಸಾಧ್ಯವಿಲ್ಲದ ಅರಸುಗಳಿಗೆ ಬ್ರಾಹ್ಮಣಧಾರೆಗಳು ಕೂಡದು ಎಂಬುದೇ ೧೬ನೇ ಕಟ್ಟಳೆ.

ಭೂತಾಳ ಪಾಂಡ್ಯನ ನಂತರ ಅಳಿಯಕಟ್ಟು ಅಚರಣೆಗೆ ಬಂತು. ಅ ಪ್ರಕಾರವಗಿ ಎಲ್ಲರೂ ಅವನನ್ನು ಅನುಸರಿಸುವಂತಾಯಿತು.ಮಾತ್ರವಲ್ಲ ಅದರ ವಿವಿಧ ಕಟ್ಟು ಕಟ್ಟಳೆಗಲನ್ನು ಘೋಷಿಸಲಾಗಿದೆ. ಇದರ ಸರಿಯ ಅನುಷ್ಠಾನಕ್ಕೆ ಒಟ್ಟು ಹದಿನಾಲ್ಕು ಕಟ್ಟುಗಳನ್ನು ಗೋಷಿಸುತ್ತಾನೆ. ಅವುಗಳೆಮದರೆ ೧ನೇ ಜಾತಿ, ಎರಡನೇ ನೀತಿ, ೩ನೇ ಮಾನ, ೪ನೇ ಮರ್ಯಾದಿ,೫ನೇ ಹುಟ್ಟು, ೬ನೇ ಕಟ್ಟು, ೭ನೇ ಹಿಂದೆ, ೮ನೇ ಮುಂದೆ, ೯ನೇ ಹೆಚ್ಚು, ೧೦ನೇ ಕಮ್ಮಿ, ೧೧ ನೇ ಬಳ, ೧೨ನೇ ಬಣ್ಣ, ೧೩ನೇ ಅಳ, ೧೪ನೇ ಉಳ ಈ ರೀತಿಯಾಗಿ ಅಳಿಯ ಸಂತಾನ ಕಟ್ಟು ಪ್ರಾಬಲ್ಯಕ್ಕೆ ಬಂತು.

ಹೀಗೆ ತನ್ನ ಮಗನನ್ನು ಬಲಿಕೊಡಲು ಸಾಧ್ಯವಾಗದೆ ಇದ್ದು ತಂಗಿ ತನ್ನ ಮಗನನ್ನು ನೀಡಲು ಸಿದ್ಧವಾದ ನಂತರ ಎಲ್ಲವೂ ಸುಖಾಂತ್ಯವಾಗುವಾಗ ಈ ಕಟ್ಟಳೆಗಳ ಘೋಷಣೆಯಾಗುತ್ತದೆ. ಬೇರೆ ಬೇರೆ ಕಟ್ಟು ಮತ್ತು ಕಟ್ಟಳೆಗಳಲ್ಲಿ ಗಮನಿಸತಕ್ಕ ವಿಚಾರವೆಂದರೆ ತುಳುನಾಡಿನಲ್ಲಿ ಆಗಲೇ ಹಲವಾರು ಜಾತಿ ಜನಾಂಗಗಳು ನೆಲೆಗೊಂಡಿದ್ದವುಮತ್ತು ಭೂತಾಳ ಪಾಂಡ್ಯ ಕಟ್ಟಳೆಗಳನ್ನು ವಿಧಿಸುವಾಗ ಅವರನ್ನೂ ಕೂಡಾ ಗಮನದಲ್ಲಿರಿಸಿಕೊಂಡಿದ್ದನು. ಇಲ್ಲದಿದ್ದರೆ ತುಳುನಾಡಿನ ಮೂಲ ಜನಾಂಗವನ್ನು ಮಾತ್ರಾ ಗಣನೆಗೆ ತೆಗೆದುಕೊಂಡಿದ್ದರೆ ಸಾಕಾಗಿತ್ತು.

### ೨.೩ ಭೂತಾಳ ಪಾಂಡ್ಯನ ಕಟ್ಟಳೆಗಳಿಗೆ ಮೂಲ ಕಾರಣ

ಅಳಿಯ ಕಟ್ಟು ಭೂತಾಳ ಪಾಂಡ್ಯನಿಂದ ಆರಂಭವಾಯಿತು ಎನ್ನುವ ಮಾತನ್ನು ಈಗಾಗಲೇ ದೂರ ಸರಿಸಿ ಆಗಿದೆ. ಇದಕ್ಕಿರುವ ಪ್ರಧಾನ ಕಾರಣಗಳನ್ನು ಚರ್ಚಿಸಲಾಗಿದೆ. ಕಟ್ಟಳೆಗಳ ಆಧಾರದ ಮೇಲೆಯೂ ಅದನ್ನು ಅರ್ಥೈಸುವುದಕ್ಕೆ ಸಾಧ್ಯವಿದೆ. ಅಳಿಯ ಕಟ್ಟು ಪದ್ಧತಿಯನ್ನು ಈ ಕೆಳಗಿನ ಕಾರಣಗಳಿಗಾಗಿ ಮತ್ತು ಅನಿವಾರ್ಯತೆಗಾಗಿ ಭೂತಾಳ ಪಾಂಡ್ಯ ಅಥವಾ ಅವನ ಮೂಲಕ ಆಚರಣೆಗೆ ತಂದದ್ದಾಗಿರಬೇಕು. ಇತರ ಯಾವುದೇ ಬಾಹ್ಯ ಕಾರಣಗಳನ್ನು ಚರ್ಚಿಸುವ ಮೊದಲು ಕಟ್ಟಳೆಗಳ ಆಧಾರದಲ್ಲಿ ಗಮನಿಸಿದಾಗ ಇನ್ನಷ್ಟು ಒಳಸುಳಿಗಳು ಲಭ್ಯವಾಗುತ್ತವೆ. ಹದಿನಾರು ಕಟ್ಟಳೆಗಳ ಪ್ರತಿಯೊಂದು ನಿಯಮವನ್ನು ರೂಪಿಸುವಾಗಲೂ ಆತನ ಮನದಾಳದಲ್ಲಿ ಯೋಜಿಸಲ್ಪಟ್ಟಿದ್ದ ಹಲವಾರು ವಿಚಾರಗಳು ಪ್ರಕಟಗೊಂಡದ್ದು ಕಂಡು ಬರುತ್ತವೆ. ಇದರಲ್ಲಿ ಮುಖ್ಯವಾಗಿ ತನ್ನ ನೆಲೆಯನ್ನು ಭದ್ರಗೊಳಿಸಲು ಕಂಡುಕೊಂಡ ಮಾರ್ಗಗಳ ಹಾಗೆ ಭಾಸವಾಗುತ್ತದೆ. ಆದುದರಿಂದ ದಂತ ಕತೆಯ ಭಾಗವನ್ನು ಪ್ರತ್ಯೇಕವಾಗಿಟ್ಟು ನೋಡಬೇಕಾದ ಅಗತ್ಯ ಕಂಡುಬರುತ್ತದೆ.

### ೨.೩.೧ ಮತೀಯ ಸಂಘರ್ಷ

ಭೂತಾಳ ಪಾಂಡ್ಯನ ಕಾಲಕ್ಕೆ ಅದಾಗಲೇ ತುಳುನಾಡಿನಲ್ಲಿ ಅನ್ಯ ಮತೀಯ ಪ್ರಭಾವ ಕಾಣಿಸಿಕೊಂಡಿತ್ತು. ವಿವಿಧ ಪೂಜಾ ಕಾರ್ಯಗಳನ್ನು ನೆರವೇರಿಸಲು ಬಂದಿರುವ ಬ್ರಾಹ್ಮಣರು ಒಂದು ಕಡೆ ಇದ್ದರೆ ಮತ್ತೊಂದೆಡೆ ಅಹಿಂಸಾ ಧರ್ಮವನ್ನು ಬೋದಿಸುತ್ತಾ ದಕ್ಷಿಣ ಭಾಗದಲ್ಲಿ ತಮ್ಮ ಧರ್ಮದ ಬೇರನ್ನು ಗಟ್ಟಿಗೊಳಿಸಲು ಜೈನ ಧರ್ಮಿಯರು ಪ್ರಯತ್ನಿಸುತ್ತಿದ್ದರು. ಸಾಮಾಜಿಕ ವ್ಯವಸ್ಥೆಯಲ್ಲಿ ಆಗುತ್ತಿರುವ ಮತೀಯ ಬೆಳವಣಿಗೆಗಳು ವ್ಯಕ್ತಿಗಳಿಗೆ ತಟ್ಟಿದಾಗ ಅಲ್ಲಿ ಸಂಘರ್ಷ ಏರ್ಪಟ್ಟಿರಬೇಕು. ಕುಟುಂಬವೊಂದರಿಂದ ಆರಂಭವಾಗಬಹುದಾದ ಬದಲಾವಣೆ ಇಡೀ ಸಮುದಾಯವನ್ನು ವ್ಯಾಪಿಸುವ ಭಯ ಕಾಡಿದಾಗ ಅಲ್ಲಿ ಮತ್ತೆ ಗೊಂದಲ ನಿರ್ಮಾಣವಾಗುತ್ತದೆ. ಗೊಂದಲ ಪರಿಹಾರಕ್ಕಾಗಿ ದಾರಿಯೊಂದರ ಹುಡುಕಾಟ ಅನಿವಾರ್ಯವಾಗಿತ್ತು. ಅವಶ್ಯಕತೆಯೇ ಅಂದಿನ ಜನಾಂಗ ಪ್ರಮುಖರನ್ನು ಚಿಂತಿಸುವ ದಾರಿಯಲ್ಲಿ ಕೊಂಡೊಯ್ದಾಗ ಇನ್ನಷ್ಟು ಚಿಂತನಶೀಲ ಸಮೂಹಕ್ಕೆ ನಾಯಕನಾಗಿ ಭೂತಾಳಪಾಂಡ್ಯ ನೇಮಿಸಲ್ಪಟ್ಟು ಒಟ್ಟು ವ್ಯವಸ್ಥೆಗೆ ಚೌಕಟ್ಟು ನೀಡಿರಬೇಕು ಎಂದು ಊಹಿಸಬಹುದಾಗಿದೆ. ಈ ಮೇಲಿನ ಚಿಂತನೆ ಪುಷ್ಟಿ ನೀಡುವ ಭೂತಾಳ ಪಾಂಡ್ಯನ ಆರನೇ ಕಟ್ಟು ಇದೆ. ಆರನೆ ಕಟ್ಟು:-ಮೇಲೆ ಬರೆದ ಮಕ್ಕಳ ಕಟ್ಟಿನ ಎಲ್ಲ ಜಾತಿಯವರು ಇನ್ನು ಆಚಂದ್ರಾರ್ಕ ಪರಿಯಂತರ ಮಕ್ಕಳ ಕಟ್ಟನ್ನು ಆಚರಿಸಬೇಕು. ಇದರಲ್ಲಿ ಸೂತಕ, ಪಾತಕ, ಪಾಪ, ಪುಣ್ಯ, ದಾನ, ಧರ್ಮ, ಕೀರ್ತಿ, ಅಪಕೀರ್ತಿ, ಹೆಂಡತಿ, ಮಕ್ಕಳಿಗಲ್ಲದೆ, ಸಂತಾನದವರಿಗೆ ಬರಲಿಕ್ಕೆ ಕಾರಣವಿಲ್ಲ. ಕುಟುಂಬದವರಿಗೆ ವಾಂದಿಕ ಅಂದರೆ ಕೂಡಿ ಇದ್ದರೆ ಮಾತ್ರ ಮೂರು ದಿವಸದ ಸೂತಕ ಉಂಟು ಸತ್ತವನ ಸರ್ವಸ್ವ ಬದುಕಿಗೆ ಮಾತ್ರ ಅಳಿಯ ಮೊದಲಾದವರು ಹಕ್ಕುದಾರರು. ಹೆಂಡತಿಗೆ ಬದುಕಿನಲ್ಲಿ ಹಕ್ಕಿಲ್ಲವೆಂಬುದೇ ೬ನೇ ಕಟ್ಟು. (ಪು.ಸಂ.೮೬)

ವೃತ್ತಿ ಸಂಬಂಧವಾಗಿ ಜಾತಿಗಳ ಸಂಖ್ಯೆ ಹೆಚ್ಚಾಗುತ್ತ ಸಾಗಿದಾಗ, ಇತರರಿಗಿಂತ ಪ್ರತ್ಯೇಕವಾಗಿರಬೇಕು ಎನ್ನುವ ಯೋಚನೆ ಮಾಡುವುದು ಸಹಜವಾಗಿದೆ, ಅದು ಒಟ್ಟು ಆ ಸಮೂಹಕ್ಕೆ ಸೇರ್ಪಡೆಯಾದಾಗ ತಮ್ಮದೇ ಪ್ರತ್ಯೇಕ ಆಚರಣೆಯನ್ನು ಅನುಷ್ಠಾನಗೊಳಿಸಬೇಕು ಎನ್ನುವ ಮನೋಭಾವ ಸ್ವಾಭಾವಿಕವಾದದ್ದು ಆದುದರಿಂದಲೇ ಅದನ್ನು ನಿಯಂತ್ರಣ ಮಾಡಬೇಕಾಗಿ ಬಂತು. ಇದು ಸುಲಭದ ಕಾರ್ಯವಾಗಿರಲಿಲ್ಲ. ಸ್ಪಷ್ಟವಾದ ಚೌಕಟ್ಟೊಂದರ ಅಗತ್ಯವಿತ್ತು. ಈ ಸಂದರ್ಭದಲ್ಲಿ ಅದಕ್ಕೆ ಪೂರಕ ವಾತಾವರಣ ನಿರ್ಮಾಣವಾಗಿತ್ತು. ‘ಘುಚಿಣಜಚಿಜಿ ಟಚಿಥಿ ಛಿಜ ಣುಜ ಉಡಿಚಿ ಜಿ ಣುಜ .ಥಿಣಚಿಜು ತಿಜಿಚುಜಿ ಣುಜ ಟಚಿಣಡಿಚಿಡಿಛಿಚಿಟಚಿ ಣುಜಿಉಡಿಥಿ, ಚಿ ೫ಾ ೧ ಛಿಚಿಟಟಜು, ೧ .ಣಾಜಿಜಿಛಿಜುಣ ಣಂ ಜುಫಟಚಿಟು ಚಿತಿಚಿಥಿ ಚಿಟಟ ಣುಜ .ಛಿಚಿಟ ಓಜುಉಜುಚಿ ೫ಾ ರಿಡಿಛಿಜುಣ, ಣುಜಿಜ ಛಿಚಿಟ ಛಿಜ ಟಂ ಜಣಾಛಾ ಣುಚಿಣ ಣುಜ ಚಿಟಥಿಚಿ .ಚಿಟಣುಚಿಟಿಚಿ .ಥಿಣಚಿಜು ತುಜುಛಿಚಿಣಜ ಚಿ .ಛಿಚಿಟ ಉಡಿಚಿಟಛಿಚಿಣಉ, ತಿಛಿಜ ರಿಡಿಉಡಿಜ ಟಾಾ ೧ಚಿತಿಜ ಛಿಜುು ಚಿಡಿಡಿಛಿಾಜು ಚಿಣ ಚಿ ತುಜಿಥಿ ಜುಚಿಡಿಟಥಿ .ಣಚಿಉಜ ಆ ೫ಾ ಛಿಉಾಜ ಚಿಟಜ ಣುಉಾ ಣುಜ ಛಿಉಾಣಡಿಥಿ ತಿಚಿ ಛಿಛಿಣಾಜು ಛಿಥಿ ಣುಜ ಷಡಿಚಿಟು ಣುಜಿ ಛಿಉಟಾಜು ಟಜಿಾಛಿಉಾ, ಥಿಜಾ ಣುಛಿಜು ಟಚಿಣಣಜಿ ತಿಜಿಜ ಟಉಾ ಚಿಛಿಟಜ ಣಂ ಜುಛಿಜಾ ಚಿಟಥಿ ಟಚಿಣಟಿಂ ತುಜಿಟಣಾಜುಛಿಜ ಣಉ ಣುಜು ಚಿಟಜ ಟಾಜುಜಿಥಿ ಚಿಟಥಿ ಉಜಿ ಣುಜ ಛಿಣಾಉ ಣಂ ಚಿಟ ಚಿರಿರಿಡಿಜುಛಿಚಿಛಿಟಜ ಜಜಿಉಜು ಐಜಚಿತುಟಂ ಣುಜ ಣಡಿಚಿಜುಉಾಚಿಟ ೪ಾಉಥಿ ಚಿರಿಚಿಡಿಣ, ೫ಾ .ಜು ಛಿಜಿಉಣಚಿು ಣುಚಿಣ ಣುಜ ತಿಉಟಜ ಉಜಿ ಣುಜ ಣಣಟಣ ಛಿಉಾಣಡಿಥಿ ತಿಚಿ ಉಜಿಉಟಜು ಜಿಉ ಟಉಜ ಣುಚಿಟ ಣುಜ ಣುಡಿಜು ಉಜಿ ಜಿಉಾ ೧ಣಾಟಜಡಿಜು ಥಿಜಚಿಡಿ ಛಿಥಿ ಣುಜ ರಿಚಿಟು ಛಿಟಟು ತಿಂ ತಿಜಿಜಟು ಟಂ ತಿಚಿಥಿ ಜುಉಜು ಣಉತಿಚಿಡಿಜ ೫ಡಿಚಿಟಟು ಚಿಟಜ ತಿಂ ತಿಜಿಜ ಣುಜುಜುಟಜು ಣುಜ ಣಉ ೧ಉಟಜಜಿ ಉಜಿ ಣುಜು ಚಿಟಥಿಚಿ .ಚಿಟಣುಚಿಟಿಚಿ .ಥಿಣಚಿಜು ಚಿ ಣುಜಿ ೪ಾಉಥಿ ಡಿಜುಟಚಿಣಾಜು (ಕಓ೦೨೬೫)ಎಂದು ಗುರುರಾಜ ಭಟ್ಟರು ಅಭಿಪ್ರಾಯ ಪಡುತ್ತಾರೆ.

### ಕೌಟುಂಬಿಕ ಅಸಮತೋಲನ

ಚರಿತ್ರೆಯಿಂದ ತಿಳಿದುಬರುವಂತೆ ಈ ಶತಮಾನದ ಆರಂಭಕಾಲ ಯುದ್ಧದ ಕಾಲವಾಗಿತ್ತು. ಯಾವುದೇ ಊರಿನಲ್ಲಿ, ಆ ರಾಜ್ಯದ ಮೇಲೆ ನೆರೆಕರೆಯ ರಾಜರು ದಂಡೆತ್ತಿ ಬಂದಾಗ ಅಥವಾ ಒಬ್ಬ ರಾಜ ಇನ್ನೊಂದು ರಾಜ್ಯದ ಮೇಲೆ ದಂಡೆತ್ತಿ ಹೋದಾಗ ಅಲ್ಲಿನ ಸೈನಿಕರು (ಬಂಟರು) ಯುದ್ಧದಲ್ಲಿ ಭಾಗವಹಿಸುವುದು ಸಹಜವಾಗಿತ್ತು. ಅಂಥ ಸಂದರ್ಭದಲ್ಲಿ ಆತನ ಮನೆಯ ಸ್ತ್ರೀಯರು ವಿವಿಧ ಕಾರಣಗಳಿಗಾಗಿ ಇನ್ನೊಬ್ಬನನ್ನು ಆಶ್ರಯಿಸುವುದು ಸ್ವಾಭಾವಿಕವಾಗಿತ್ತು. ಈ ಆಶ್ರಯ ಕೆಲವೊಮ್ಮೆ ನಿಯಂತ್ರಣ ಮೀರಿದಾಗ ಅಲ್ಲಿ ಅನೈತಿಕತೆಗೆ ನಾಂದಿಯಾಗುವುದು ಸಾಧ್ಯವಿತ್ತು, ಭೂತಾಳ ಪಾಂಡ್ಯನ ಹದಿನಾರು ಕಟ್ಟಳೆಗಳನ್ನು ಗಮನಿಸುವಾಗ ಈ ವಿಚಾರ ಮನದಟ್ಟಾಗುತ್ತದೆ. ಮುಖ್ಯವಾಗಿ ಗಂಡನಿದ್ದು ಇನ್ನೊಬ್ಬನೊಂದಿಗೆ ಸಂಪರ್ಕ ಬೆಳೆಸುವುದು ಮತ್ತು ಗಂಡನ

ಅನುಪಸ್ಥಿತಿಯಲ್ಲಿ ತನ್ನ ವಾಂಛೆ ತೀರಿಸಲು ಇನ್ನೊಬ್ಬನೊಂದಿಗೆ ಸಂಬಂಧ ಬೆಳೆಸುವುದು ಈ ಎರಡು ಸಂದರ್ಭಗಳಲ್ಲಿಯೂ ಕೌಟುಂಬಿಕ ಅಸಮತೋಲನ ಉಂಟಾಗುತ್ತದೆ. ಅಂಥವರಿಗೆ ಶಿಕ್ಷೆ ನೀಡಲು ಯಾವುದೇ ಲಿಖಿತ ಕಾನೂನು ಅಥವಾ ದಾಖಲಿತ ಕಾನೂನು ಇದ್ದಿರಲಿಕ್ಕಿಲ್ಲ. ಇಂತಹ ಸೂಕ್ಷ್ಮ ಸಮಸ್ಯೆಗಳನ್ನು ನಿಭಾಯಿಸಲು ನಂಬಿಕೆಯ ಸೂತ್ರವೊಂದು ಬೇಕಾಗಿತ್ತು. ಈ ಘಟನೆಯ ಮೂಲಕ ಅದಕ್ಕೊಂದು ದಾರಿಯನ್ನು ಅಥವಾ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯಾವಾಗಿರಬೇಕು.

**ಸ್ವಚ್ಛಂದತೆ**

ಸಾಮಾಜಿಕ ವ್ಯವಸ್ಥೆಗೆ ಕುಟುಂಬ ಮೂಲ ಘಟಕ. ಕುಟುಂಬಗಳೆಲ್ಲಾ ಸೇರಿ ಒಂದು ಜಾತಿಯನ್ನು ಸೃಷ್ಟಿಸುತ್ತವೆ. ಕುಟುಂಬಕ್ಕೆ ವ್ಯಕ್ತಿಗತ ಮೂಲವೇ ಆಧಾರ. ಜಾತಿಗಳ ಮಧ್ಯೆ ಇದ್ದಂತಹ ಅಂತರ ಈಚೆಗಿನ ಬೆಳವಣಿಗೆ ಬಹುಶಃ ಆಗಿನ ಕಾಲದಲ್ಲಿ ಅದು ಸ್ಪಷ್ಟವಾಗುತ್ತಾ ಬಂದಿರಬೇಕು. ವ್ಯಕ್ತಿಗತ ಶಿಷ್ಟಾಚಾರಕ್ಕೆ ಅಪಚ್ಯುತಿ ಬಂದಾಗ ಕೌಟುಂಬಿಕ ವ್ಯವಸ್ಥೆ ಕೆಡುತ್ತದೆ, ಇದು ಸಾಮಾಜಿಕ ಅವ್ಯವಸ್ಥೆಗೆ ಕಾರಣವಾಗಬಹುದು ಎನ್ನುವ ಮನೋಭಾವ. ಸಾಮಾಜಿಕ ವ್ಯವಸ್ಥೆಗೆ ಧಕ್ಕೆ ಬಂದರೆ ರಾಜ್ಯವೊಂದನ್ನು ನಿಯಂತ್ರಿಸುವುದು ಕಷ್ಟವಾಗುತ್ತದೆ. ಆದುದರಿಂದ ವ್ಯಕ್ತಿಗತ ನೆಲೆಯಲ್ಲಿಯೂ ಒಬ್ಬನನ್ನು ನಿಯಂತ್ರಿಸುವ ಅಗತ್ಯವಿದೆ.

ಬೇರೆ ಬೇರೆ ಜಾತಿಗಳ ಹೆಣ್ಣು ಗಂಡು ಪರಸ್ಪರ ಒಂದಾಗುವುದಕ್ಕೆ ಅವಕಾಶ ಕೊಟ್ಟರೆ ಜಾತಿಗಳ ಮೇಲಿದ್ದ ನಿಯಂತ್ರಣ ಕಡಿಮೆಯಾಗುತ್ತಾ ಹೋಗುತ್ತದೆ. ಇದನ್ನು ತಡೆಯಲು ಜಾತಿಗಳು ಆದಷ್ಟು ಪ್ರತ್ಯೇಕವಾಗಿದ್ದರೆ ಅನುಕೂಲ ಎನ್ನುವ ದೃಷ್ಟಿಯಲ್ಲಿ ಕೆಲವಾರು ಕಟ್ಟಳೆಗಳನ್ನು ರೂಪಿಸಲಾಗಿದೆ. ಯಾವುದೇ ಹೆಣ್ಣು ಕೀಳುಜಾತಿಯವನೊಂದಿಗೆ ಸಂಪರ್ಕ ಬೆಳೆಸಿದರೆ ಅವಳನ್ನು ಜಾತಿಯಿಂದ ತೆಗೆದುಹಾಕ ಬೇಕೆಂದು ಕಟ್ಟಳೆಯಲ್ಲಿ ತಿಳಿಸಲಾಗಿದೆ. ಜಾತಿಯಿಂದ ತೆಗೆದು ಹಾಕಬೇಕಾದುದು ಹೆಣ್ಣನ್ನು ಮಾತ್ರ ಎಂಬುದು ಇಲ್ಲಿ ಗಮನಾರ್ಹ ಗಂಡಿಗೆ ಏನೂ ಸಮಸ್ಯೆ ಇಲ್ಲ. ಅದೇ ಗಂಡು ಮೇಲ್ಜಾತಿಯವನಾದರೆ ಅವನಿಗೆ ಮದುವೆ ಮಾಡಿಕೊಡಬಹುದು. ಯಾವುದೇ ಹೆಣ್ಣು ತಾನಿರುವ ಜಾತಿಯನ್ನು ಬಿಟ್ಟು ಹೋಗಬಾರದು ಎನ್ನುವ ಮನೋಭಾವದಲ್ಲಿ ಈ ಕಟ್ಟಳೆಯನ್ನು ಹಾಕಿರಬೇಕು. ಇದರಿಂದಾಗಿ ಅನ್ಯ ಜಾತಿಯವನ ಸಂಪರ್ಕವಾಗುವ ಅವಕಾಶ ಬಂದರೂ ಅದರ ಪರಿಣಾಮವನ್ನು ಗಮನಿಸಿ ಆಕೆ ಅವನಿಂದ ದೂರ ಸರಿಯಬಹುದು. ಇದರಿಂದಾಗಿ ಆದಷ್ಟು ವರ್ಣ ಸಂಕರವನ್ನು ಕಡಿಮೆಗೊಳಿಸಬಹುದೆಂದು ಈ ಕಟ್ಟನ್ನು ರೂಪಿಸಿದಂತೆ ಕಂಡು ಬರುತ್ತದೆ.

**ಅಳಿಯ ಕಟ್ಟಿನ ಘೋಷಣೆ**

ಭೂತಾಳ ಪಾಂಡ್ಯನ ದಂತಕತೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಆಗಿರುವ ವಿವಿಧಬೆಳವಣಿಗೆಗಳನು ಗುರುತಿಸುವಾಗ ಅಳಿಯ ಸಂತಾನಕಟ್ಟು ಈ ಒಂದು ಪ್ರಸಂಗದಿಂದ ಆರಂಭವಾಯಿತು ಎಂದು ತಿಳಿಯುತ್ತದೆ. ಆದರೆ ವಿವಿಧ ವಿದ್ವಾಂಸರು ಈಗಾಗಲೇ ಈ ಕುರಿತು ಸಂಶೋಧನೆ ಕೈಗೊಂಡು ಹಲವಾರು ವಾದಗಳನ್ನು ಮಂಡಿಸಿದ್ದಾರೆ.

'ಭೂತಾಳ ಪಾಂಡ್ಯನು ಬಾರಕೂರಿನಲ್ಲಿ ರಾಜ್ಯವಾಳಿದ ಕುರಿತು ಯಾವುದೇ ಐತಿಹಾಸಿಕ ಆಧಾರ ಸಿಗುವುದಿಲ್ಲ.ಇದು ಕ್ರಿ ಶ೭೭ರಲ್ಲಿ ನಡೆದ ಘಟನೆ ಆಗಿದ್ದರೆ ಅದರ ಉಲ್ಲೇಖ ಮುಂದಿನ ಶಾಸನದಲ್ಲಾದರೂ ಸಿಗುತ್ತಿತ್ತು. ಆದ್ದರಿಂದ ಇದು ಊಹಾ ಪೋಹದ ನಂತರ ರಚಿಸಿದ್ದು.' ಎಂದು ಗುರುರಾಜ ಭಟ್ಟರು ಅಭಿಪ್ರಾಯ ಪಡುತ್ತಾರೆ. ಡಾ ಭಾಸ್ಕರಾನಂದ ಸಾಲೆತ್ತೂರು ಅವರು ಭೂತಾಳ ಪಾಂಡ್ಯನೆಂಬ ವ್ಯಕ್ತಿ ತುಳುನಾಡಿನಲ್ಲಿ ಆಡಳಿತ ನಡೆಸಿದ್ದಿಲ್ಲ' ಎಂದು ಹೇಳುತ್ತಾರೆ(ಶಿರೂರು ಶಿವರಾಮ ಶೆಟ್ಟಿ : ಪು :೨೬)

ಅತನಿದ್ದುದು ಕ್ರಿ ಶ ಎರಡನೇ ಶತಮಾನದಲ್ಲಿಯೇ ಅಥವಾ ಸ್ವಲ್ಪ ಈಚೆ ಎಂದಾದರೂ ಅಳಿಯಕಟ್ಟನ್ನು ಪ್ರಥಮವಾಗಿ ಸ್ಥಾಪಿಸಿದಾತನು, ಎಂದಿಗೂ ಅತನಲ್ಲ.ಆತನ ಕಾಲದಲ್ಲಿ ಆ ಕಟ್ಟಳೆ ಅನುಷ್ಟಾನದಲ್ಲಿಯೇ ಅಥವಾ ಪ್ರಯೋಗದಲ್ಲಿಯೇ ಶಿಥಿಲವಾದುದನ್ನು ಕಂಡನೇ ಆತನು ಅದನ್ನು ಮಾರ್ಪಡಿಸಿರಬೇಕು.ಅದೇ ಕಾರಣದಿಂದಲೇ ಆಗಿರಬೇಕು ಆ ಕಟ್ಟುಕಟ್ಟಲೆಗಳಿಗೆ ಅತನ ಹೆಸರು ಹೊಂದಾಣಿಕೆಯಾಗಿರಬಹುದು. ಮತ್ತು ಆತನಿಂದ ಈ ವರೆಗೂ ಬೇರೆ ಯಾವೊಬ್ಬನಾದರೂ ಆ ಬಳಿಕ ಅವನ್ನು ಮರಳಿ ಮಾರ್ಪಡಿಸಿಲ್ಲ, ಸುದಾರಿಸಲಿಲ್ಲ ಎಂಬುದರಿಂದ ಆತನೇ ಅದರ ಸಂಸ್ಥಾಪಕನೆಂದು ವ್ಯಾಪಕನೆಂದು ಪ್ರತೀತಿಗೊಂಡಿರಬೇಕು' ಎಂಬುದಾಗಿ ಗೋವಿಂದ ಪೈ ಸಂಶಯ ವ್ಯಕ್ತಪಡಿಸಿದ್ದಾರೆ.( ಗೋವಿಂದ ಪೈ ಸಂಶೋಧನಾ ಸಂಪುಟ :ಪು :೫೯)

ಭೂತಾಳ ಪಾಂಡ್ಯ ಎನ್ನುವ ವ್ಯಕ್ತಿಯ ಅಸ್ತಿತ್ವವೇ ಇಲ್ಲದಿರುತ್ತಿದ್ದರೆ ಹೇಗೆ ಆ ಹೆಸರು ಮತ್ತು ಆ ಕಟ್ಟಿಗೆ ಹೇಗೆ ವ್ಯವಸ್ಥಿತ ರೂಪ ಬಂತು ಎನ್ನುವದು ಸಂಶಯಕ್ಕೆ ಎಡೆ ಮಾಡಿಕೊಡುತ್ತದೆ. ಭೂತಾಳ ಪಾಂಡ್ಯ ಎಂಬ ಅರಸು ಇರಲಿ ಅಥವಾ ಇರದಿರಲಿ ಅವನ ಹೆಸರಿನಲ್ಲಿ ಅಚರಣೆಗೆ ಬಂದಿರುವ ಅಳಿಯ ಸಂತಾನಕಟ್ಟು ಮತ್ತು ಕಟ್ಟಳೆಗಳು ಇಂದಿಗೂ ಪ್ರಸ್ತುತ.ಇದೊಂದು ಸಾಮಾಜಿಕ ಸಂವಿದಾನ ಮತ್ತು ನಿಬಂಧನೆಯಾಗಿದೆ(ಶಿರೂರು ಶಿವರಾಮ ಶೆಟ್ಟಿ : ಪು ೬೮)

ಅಳಿಯ ಸಂತಾನ ಭೂತಾಳ ಪಾಂಡ್ಯನಿಂದ ಆರಂಭವಾದದ್ದಲ್ಲ. ಹಿಂದೆ ಇದ್ದಂತಹ ಪದ್ಧತಿಗೆ ಒಂದು ವ್ಯವಸ್ಥಿತ ರುಪವನ್ನು ಕೊಟ್ಟದ್ದು ಇವನು ಎಂಬುದಂತೂ ಸತ್ಯ. ಇಲ್ಲದಿದ್ದರೆ ಯಾವುದೇ ವ್ಯವಸ್ಥೆಯೊಂದು ಅಷ್ಟು ಸಾಂವಿದಾನಿಕವಾಗಿ ಜಾರಿಗೊಳಿಸಲು ಸಾಧ್ಯವಿಲ್ಲ. ಮಾತ್ರವಲ್ಲದೆ ಅ ವರೆಗೆ ಜಾರಿಯಲ್ಲಿಲ್ಲದ ನಿಯಮವೊಂದನ್ನು ಇದ್ದಕ್ಕಿದ್ದ ಹಾಗೆ ಕೇವಲ ವೈಯಕ್ತಿಕ ಘಟನೆಯೊಂದರ ಆಧಾರದಿಂದ ಸಾಮಾಜಿಕವಾಗಿ ಪ್ರತಿಷ್ಠಾಪಿಸಲು ಸಾಧ್ಯವಿಲ್ಲ.

ಅಳಿಯ ಸಂತಾನ ಕಟ್ಟಿಗೆ ಮೂಲಕಾರಣವಾಗಿರುವ ಮಾತೃ ಮೂಲಿಯ ವ್ಯವಸ್ಥೆ ಆದಾಗಲೇ ತುಳುನಾಡಿನಲ್ಲಿ ಜಾರಿಯಲ್ಲಿತ್ತು. ಈ ಮೊದಲೇ ಚರ್ಚಿಸಿದಂತೆ ಇದು ಯಾವುದೇ ವ್ಯಕ್ತಿಯಿಂದ ಜಾರಿಗೊಳಿಸಲ್ಪಟ್ಟದ್ದು ಅಲ್ಲ ; ಬದಲಾಗಿ ಸಾಮಾಜಿಕ ಪರಿಸರ ಆ ಕಟ್ಟಳೆಗೆ ಮೂಲ ವ್ಯವಸ್ಥೆಯನ್ನು ಒದಗಿಸಿತು. ಹೇಗಿದ್ದರೂ ಅಳಿಯ ಸಂತಾನ ಕಟ್ಟು ಮಾತೃ ಪ್ರಧಾನ ವ್ಯವಸ್ಥೆಗಿಂತ ಪ್ರತ್ಯೇಕವಾಗಿ ನಿಲ್ಲದೆ ಅದರ ಒಳಗೇ ಇದ್ದುಕೊಂಡು ಅದರ ಒಂದು ಭಾಗವಾಗಿ ನಿಲ್ಲುತ್ತದೆ.

**ಪರಾಮರ್ಶನ ಸಾಹಿತ್ಯ.**


೧. ಅಮೃತ ಸೋಮೇಶ್ವರ (ಡಾ) ೨೦೦೧
ತುಳು ಜಾನಪದ ಕೆಲವು ನೋಟಗಳು, ಕನ್ನಡ ವಿಶ್ವವಿದ್ಯಾನಿಲಯ ಹಂಪಿ

೨. ಅಮೃತ ಸೋಮೇಶ್ವರ ೧೯೭೨
ತುಳು ಪಾಡ್ದನದ ಕತೆಗಳು, ಸಾಹಿತ್ಯಾಂಜಲಿ ಗ್ರಂಥಮಾಲೆ, ಕೋಟೆಕಾರು

೩. ಅಮೃತ ಸೋಮೇಶ್ವರ ೧೯೯೫
ಪಾಡ್ದನ ಸಂಪುಟ, ಕನ್ನಡ ವಿಶ್ವ ವಿದ್ಯಾಲಯ ಹಂಪಿ

೪. ಕೆ.ಜೆ.ಶೆಟ್ಟಿ ಕಡಂದಲೆ
ತುಳು ನಾಡ ಸಿರಿ, ನವಶಕ್ತಿ ಪ್ರಕಾಶನ, ಕಡಂದಲೆ(ದ.ಕ)

೫. ಎನ್.ಆರ್. ನಾಯಕ ೧೯೮೨
ಕಾರವಾರ ಜಿಲ್ಲೆಯ ಜನಪದ ಸಾಹಿತ್ಯ, ಪ್ರಸಾರಾಂಗ ಕರ್ನಾಟಕ ವಿ.ವಿ. ಧಾರವಾಡ

೬. ಎಸ್.ಡಿ.ಶೆಟ್ಟಿ. (ಡಾ) ೨೦೦೨
ತುಳುನಾಡಿನ ಜೈನ ಧರ್ಮಒಂದು ಸಾಂಸ್ಕೃತಿಕ ಅಧ್ಯಯನ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಉಡುಪಿ
೭. ಗಾಯತ್ರೀ ನಾವಡ, ೧೯೯೭
ವಿರೇಚನೆ, ಎನ್.ಆರ್.ಎ.ಎಂ.ಎಚ್. ಪ್ರಕಾಶನ, ಕೋಟೇಶ್ವರ-೫೭೬೨೨೨,ದ.ಕ.
೮. ಗಾಯತ್ರಿನಾವಡ ೧೯೯೦
ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು ಸಿರಿ ಪ್ರಕಾಶನ, ಹೊಸಪೇಟೆ
೯. ಗುರುರಾಜ ಭಟ್.ಪಿ. (ಡಾ) ೧೯೭೨
ದಕ್ಷಿಣ ಕನ್ನಡ ತುಳುವರೂ ತುಳುವ ಸಂಸ್ಕೃತಿಯೂ ಐಬಿಎಚ್ ಪ್ರಕಾಶನ, ಬೆಂಗಳೂರು
೧೦. ಗುರುರಾಜ ಭಟ್ ೧೯೬೩
ತುಳುನಾಡು, ಪ್ರಕಾಶಕರು : ಕೆ.ಲಕ್ಷ್ಮೀನಾರಾಯಣ ಭಟ್, ಉಡುಪಿ
೧೧. ಗುತ್ತು ಶೀನಪ್ಪ ಶೆಟ್ಟಿ ೧೯೮೧
ಭೂತಾಳ ಪಾಂಡ್ಯರಾಯನ ಅಳಿಯ ಕಟ್ಟು, ಸಂಶೋಧನ ಕೇಂದ್ರ ಉಡುಪಿ
೧೨. ಗೋವಿಂದ ಪೈ ಎಂ ೧೯೯೫
ಅಳಿಯಕಟ್ಟಿನ ಪ್ರಾಚೀನತೆ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಸಂಪುಟ
೧೩. ಚಿನ್ನಪ್ಪ ಗೌಡ.ಕೆ.(ಡಾ) ೨೦೦೩
ಸಂಸ್ಕೃತಿ ಸಿರಿ, ಮದಿಪುಪ್ರಕಾಶನ ಮಂಗಳ ಗಂಗೋತ್ರಿ
೧೪. ಚಿನ್ನಪ್ಪ ಗೌಡ ಕೆ., ೧೯೮೨
ಭೂತಾರಾಧನೆ : ಕೆಲವು ಅಧ್ಯಯನಗಳು, ತುಳುವ ಪ್ರಕಾಶನ ಮಂಗಳೂರು
೧೫. ಜೋಗನ್ ಶಂಕರ್ ೧೯೬೦
ಗ್ರಾಮ ಸಮಾಜ
೧೬. ತಪಸ್ವೀ ಕುಮಾರ್ ನಂ ೧೯೯೫
ಸಂಸ್ಕೃತಿ ವಿಕಾಸ, ಪ್ರಕಾಶನ ಭಾರತಿ ಸರಸ್ವತೀ ಪುರಂ ಮೈಸೂರು
೧೭. .ನಾವಡ ಎ. ವಿ. ೧೯೯೨
ಮೌಖಿಕ ಕಾವ್ಯ ಸಂಯೋಜನೆಯ ಕನ್ನಡ ಪ್ರಕ್ರಿಯೆ, ವಿಶ್ವ ವಿದ್ಯಾಲಯ ಹಂಪಿ
೧೮. ನಾವಡ.ಎ.ವಿ ೧೯೯೫
ಸಿರಿ ಪಾಡ್ದನ ಸಂಪುಟ, ಕನ್ನಡ ವಿಶ್ವ ವಿದ್ಯಾಲಯ ಹಂಪಿ
೧೯. ನಾವಡ. ಎ. ವಿ
ತುಳು ಪಾಡ್ದನ ಬಂಧ ಮತ್ತು ವಿನ್ಯಾಸ, ಕನ್ನಡ ಪುಸ್ತಕ ಪ್ರಾಧಿಕಾರ ಪಂಪ ಮಹಾಕವಿ ರಸ್ತೆ, ಚಾಮರಾಜ ಪೇಟೆ ಬೆಂಗಳೂರು
೨೦. ಪೀಟರ್ ಜೆ ಕ್ಲಾಸ್ ೨೦೦೨
ತುಳುವ ದರ್ಶನ, ಪ್ರಾದೇಶಿಕ ವ್ಯಾಸಂಗ ಕುಂದಾಪುರ
೨೧. ಭೈರಪ್ಪ ಕೆ ೧೯೯೪
ಭಾರತೀಯ ಸಮಾಜ, ಪ್ರಕಾಶ ಸಾಹಿತ್ಯ ತಲಕಾಡ್ ಸುಬ್ಬರಾವ್
೨೨. ಮಂಗಳಾ ಚಿ.ನಾ. ೧೯೯೪
ಮಾತೃ ಪೂಜೆ, ಪ್ರಸಾರಾಂಗ ಕನ್ನಡ್ ವಿಶ್ವವಿದ್ಯಾನಿಲಯ ಹಂಪಿ
೨೩. ನಾವಡ.ಎ.ವಿ ೧೯೮೮೪
ವಿವಕ್ಷೆ, ಕರ್ನಾಟಕ ಸಂಘ, ಪುತ್ತೂರು
೨೪. ರಾಮಕೃಷ್ಣ ಆಚಾರ್ ಪಿ., ೧೯೯೫
ನಲಿಕೆ ಜನಾಂಗದ ಕುಣಿತಗಳು-ಒಂದು ಅಧ್ಯಯನ, ಪಿ.ಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ (ಅಪ್ರಕಟಿತ) ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ
೨೫. ರಾಮಕೃಷ್ಣ ಆಚಾರ್ ಪಾಲ್ತಡಿ ೧೯೯೭
ಕಲ್ಕುಡ-ಕಲ್ಲುಟಿ (ಸಂಸ್ಕೃತಿ ಶೋಧ), ಸುಪ್ರಿಯಾಪ್ರಕಾಶನ ಕೆಮ್ಮಿಂಜೆ ದೇವಾಲಯ ರಸ್ತೆ, ದರ್ಬೆ ಪುತ್ತುರು-೫೭೪೨೦೨
೨೬. ರಾಮಕೃಷ್ಣ ಆಚಾರ್ ಪಾಲ್ತಾಡಿ. ೧೯೯೯
ತುಳು ನಾಡು-ನುಡಿ, ಕರ್ನಾಟಕ ಸಂಘು, ಪುತ್ತೂರು
೨೭. ವಾದಿರಾಜ ಭಟ್ಟ ಕನಕರಾಡಿ ಎಂ ಎ ೧೯೭೪
ಪಾಡ್ದನಗಳು ಅಧ್ಯಯನಾತ್ಮಕ ಸಂಗ್ರಹ, ಯುಗಪುರುಷ ಪ್ರಕಟಣಾಲಯ ಕಿನ್ನಿಗೋಳಿ.
೨೮. ವಾಮನ ನಂದಾವರ ೧೯೯೦
ಸಿಂಗದವನ, ಹೇಮಾಂಶು ಪ್ರಕಾಶನ, ಮಂಗಳೂರು
೨೯. ವಾಮನ ನಂದಾವರ ೨೦೦೬
ಕೋಟಿಚೆನ್ನಯ : ಜಾನಪದೀಯ ಅಧ್ಯಯನ, ಹೇಮಾಂಶು ಪ್ರಕಾಶನ, ಮಂಗಳೂರು
೩೦. ವಾಮನ ನಂದಾವರ ೨೦೦೧
ಜನಪದ ಸಂಸ್ಕೃತಿ ರೂಪಿಸುವ ಬದುಕು-ಕೆಲವು ಚರ್ಚೆಗಳು, ಹೆಮಾಂಶು ಪ್ರಕಾಶನ, ಬೆಂಗಳೂರು-೨
೩೧. ವಿಜಯಶ್ರೀ ಸಬರದ, ೨೦೦೬
ಜಾನಪದ, ಮತ್ತು ಮಹಿಳೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೩೨. ವಿವೇಕ ರೈ ಬಿ.ಎ (ಡಾ) ೨೦೦೪
ಪುಟ್ಟು ಬಳಕೆಯ ಪಾಡ್ದನಗಳು, ಶ್ರೀ ಧರ್ಮಸ್ಥಳ ಮಂಜುನಾಥೇಸ್ವರ ತುಳುವೀರ, ಕುಪ್ಪೆ ಪಂಜುರ್ಲಿ
೩೩. ವಿವೇಕ ರೈ ಬಿ.ಎ (ಡಾ) ೧೯೭೭
ತೌಳವ ಸಂಸ್ಕೃತಿ ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು
೩೪. ವಿವೇಕ ರೈ ಬಿ.ಎ (ಡಾ) ೧೯೯೫
ಗಿಳಿಸೂವೆ, ಅಕ್ಕೆಸಿರಿ ಸಾಂಸ್ಕೃತಿಕ ಕೇಂದ್ರ, ಮಂಗಳೂರು
೩೫. ವಿವೇಕ ರೈ ಬಿ.ಎ (ಡಾ) ೧೯೮೦
ತುಳುವ ಅಧ್ಯಯನ : ಕೆಲವು ವಿಚಾರಗಳು, ತುಳುವ ಪ್ರಕಾಶನ, ಮಂಗಳೂರು
೩೬. ಶಾಮಾಚರ ದುಬೆ ೧೯೯೪
ಭಾರತೀಯ ಸಮಾಜ,
೩೭. ಶಿವರಾಮ ಶೆಟ್ಟಿ ಶೀರೂರು
ಬಂಟರ ಮೂಲ ಒಂದು ಅಧ್ಯಯನ, ಬಂಟರ ಯಾನೆ ನಾಡವರ ಸಂಘ ಮಂಗಳೂರು.
೩೮. ಶಿವರಾಮ ಐತಾಳ ಕೆ. ೧೯೭೮
ದಕ್ಷಿಣ ಕನ್ನಡ ಜನಪದ ಸಾಹಿತ್ಯ, ಶಾರದಾ ಮಂದಿರ, ರಾಮಯ್ಯ ರಸ್ತೆ, ಮೈಸೂರು-೪
೩೯. ಶೀನಪ್ಪ ಹೆಗ್ಡೆ ಎನ್. ಎ., ಕೆಲ್ಲೆ ಎನ್.ಎಸ್., ೧೯೫೪
ಪ್ರಾಚೀನ ತುಳುನಾಡು, ಪ್ರ : ಶ್ರೀಮತಿ ಇಂದಿರಾ ಕಿಲ್ಲೇ, ಮಂಗಳೂರು
೪೦. ಶ್ರೀಮತಿ ಎಚ್.ಎಸ್. (ಡಾ) ೨೦೦೦
ಮಹಿಳಾ ಅಧ್ಯಯನ ಕನ್ನಡ ವಿಶ್ವವಿದ್ಯಾನಿಲಯ ಹಂ
೪೧. ಶೈಲಜ ಹಿರೇಮಠ, ೨೦೦೪
ಮಾತೃ ಪ್ರಧಾನ ಪರಿಕಲ್ಪನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೪೨. .ಸಾವಿತ್ರಿ.ಕೆ. (ಡಾ) ೨೦೦೬
ನಂಬಿದ ಸತ್ಯಗಳು, ಕೆ.ಎಸ್ ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಪುರದೊಡ್ಡಿ
೪೩. ಸೂರ್ಯನಾಥ್ ಕಾಮತ್ (ಡಾ) ೧೯೭೫
ತುಳುನಾಡಿನ ಧಾರ್ಮಿಕ ಪರಂಪರೆ ರತ್ನ ವರ್ಮ ಹೆಗ್ಗಡೆ

ಸ್ಮಾರಕ ಉಪನ್ಯಾಸ, ಮಾಲೆ ಸಮಿತಿ ಉಜಿರೆ
೪೪. ಹನುಮಂತರಾವ್ ಜಿ ೧೯೬೦
ಕುಟುಂಬ ಜೀವನ, ಮೈಸೂರ್ ವಿಶ್ವ ವಿದ್ಯಾಲಯ,
೪೫. ಹೆರಂಜೆ ಕೃಷ್ಣ ಭಟ್ ೨೦೦೦
ತುಳು ಕರ್ನಾಟಕದ ಅರಸು ಮತ್ತು ಡಾ. ಎಸ್.ಡಿ.ಶೆಟ್ಟಿ ಮನೆತನಗಳು
೪೬. ಹಿರಿಯಣ್ಣ ಅಂಬಳಕೆ ೧೦೦೪
ಜಾನಪದ : ಕೆಲವು ಅಧ್ಯಯನಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು-೨